# ಹಂಪಿ ಟೈಮ್ಸ್

HAMPI TIMES
KANNADA DAILY

ಕನ್ನಡ ದಿನಪತ್ರಿಕೆ

ಸಂಪಾದಕ: ಬಸಾಪುರ ಬಸವರಾಜ
EDITOR: BASAPUR BASAVARAJA

epaper.hampitimes.com | e-mail: hampitimes@gmail.com | M:94486 33038 Reg.No.PMG/KA/NK/BLY/01/2024-2026

ಸಂಪುಟ:02 • ಸಂಚಿಕೆ: 283 • ಪಿ.ಆರ್.ಜಿ.ಐ.ನಂ.:KARKAN/2023/88055 • ವಿಜಯನಗರ • 20.05.2025 • ಮಂಗಳವಾರ • ಪುಟ:04 • ಬೆಲೆ:2

Volume:02 • Issue: 283 • PRGI No:KARKAN/2023/88055 • VIJAYANAGARA • 20.05.2025 • Tuesday • Page:04 • Rs:2







# ಇಂದು ವಿಜಯನಗರದಲ್ಲಿ ಸಮರ್ಪಣೆಯ ಸಂಕಲ್ಪ

## ಕಾಂಗ್ರೆಸ್ ಸರ್ಕಾರದ 2 ವರ್ಷಗಳ ಸಾಧನೆ ಅನಾವರಣ। ಮತ್ತಷ್ಟು ಜನಪರ ಸೇವೆಗೆ ಪ್ರತಿಜ್ಞೆ

## ಸರ್ಕಾರದಿಂದ ಒಂದು ಲಕ್ಷ ಕುಟುಂಬಗಳಿಗೆ ಹಕ್ಕು ಪತ್ರ ವಿತರಣೆ। ನಾಲ್ಕು ಲಕ್ಷ ಜನರ ನಿರೀಕ್ಷೆ

### ಮಲ್ಲಿಕಾರ್ಜುನ ಖರ್ಗೆ ಉದ್ಘಾಟನೆ। ಸಿಎಂ ಸಿದ್ದರಾಮಯ್ಯ ಅಧ್ಯಕ್ಷತೆ। ರಾಹುಲ್‌ಗಾಂಧಿ ಹಕ್ಕುಪತ್ರ ವಿತರಣೆ। ಸಚಿವರು, ಸಂಸದರು, ಶಾಸಕರು ಆಗಮನ

**■ ಹಂಪಿ ಟೈಮ್ಸ್ ಹೊಸಪೇಟೆ**

ನಗರದ ಜಿಲ್ಲಾ ಕ್ರೀಡಾಂಗಣದಲ್ಲಿ ಮೇ 20 ರಂದು ಕಂದಾಯ ಇಲಾಖೆ ಮತ್ತು ವಿಜಯನಗರ ಜಿಲ್ಲಾಡಳಿತವತಿಯಿಂದ ಆಯೋಜಿಸಿರುವ 'ಪ್ರಗತಿಯತ್ತ ಕರ್ನಾಟಕ – ಸಮರ್ಪಣೆ ಸಂಕಲ್ಪ', ಎರಡು ವರ್ಷಗಳ ಜನಪರ ಸಾಧನೆಯ ಸಮರ್ಪಣೆ, ಮತ್ತಷ್ಟು ಜನಪರ ಸೇವೆಯ ಪ್ರತಿಜ್ಞೆ, ಒಂದು ಲಕ್ಷ ಕುಟುಂಬಗಳಿಗೆ ನೆಮ್ಮದಿ ಕಂದಾಯ ಗ್ರಾಮ ಹಕ್ಕು ಪತ್ರ ಸಮರ್ಪಣೆ ಕಾರ್ಯಕ್ರಮ ಜರುಗಲಿದೆ.

ಬೆಳಿಗ್ಗೆ 11.30ಕ್ಕೆ ರಾಜ್ಯಸಭೆ ವಿರೋಧ ಪಕ್ಷದ ನಾಯಕ ಮಲ್ಲಿಕಾರ್ಜುನ ಖರ್ಗೆ ಕಾರ್ಯಕ್ರಮ ಉದ್ಘಾಟಿಸಲಿದ್ದಾರೆ. ಮುಖ್ಯಮಂತ್ರಿ ಸಿದ್ದರಾಮಯ್ಯ ಸಮಾವೇಶದ ಅಧ್ಯಕ್ಷತೆ ವಹಿಸಲಿದ್ದಾರೆ. ಲೋಕಸಭೆಯ ವಿರೋಧ ಪಕ್ಷದ ನಾಯಕ ರಾಹುಲ್ ಗಾಂಧಿಯವರು ಫಲಾನುಭವಿಗಳಿಗೆ ಹಕ್ಕುಪತ್ರಗಳನ್ನು ವಿತರಣೆ ಮಾಡಲಿದ್ದಾರೆ. ಮುಖ್ಯ ಅತಿಥಿಗಳಾಗಿ ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಸೇರಿದಂತೆ ಸರ್ಕಾರದ ಸಚಿವರು, ಶಾಸಕರು ಉಪಸ್ಥಿತರಿರಲಿದ್ದಾರೆ.

ರಾಜ್ಯ ಸರ್ಕಾರ ಮುಖ್ಯ ಕಾರ್ಯದರ್ಶಿ ಡಾ.ಶಾಲಿನಿ ರಜನೀಶ್ ಹಾಗೂ ವಿಜಯನಗರ ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿ ನವೀನ್ ರಾಜ್ ಸಿಂಗ್ ಗೌರವ ಆಹ್ವಾನಿತರಾಗಿ ಭಾಗವಹಿಸುವರು.

ಕಂದಾಯ ಸಚಿವ ಕೃಷ್ಣ ಬೈರೇಗೌಡ, ಜಿಲ್ಲಾಧಿಕಾರಿ ಎಂ.ಎಸ್.ದಿವಾಕರ್, ಜಿ.ಪಂ. ಸಿಇಓ ನೋಂಗ್ಜಾಯ್ ಮೋಹಮ್ಮದ್ ಅಲಿ ಅಕ್ರಮ್ ಷಾ, ಪೊಲೀಸ್ ವರಿಷ್ಠಾಧಿಕಾರಿ ಬಿ.ಎಲ್.ಶ್ರೀಹರಿಬಾಬು ಸೇರಿದಂತೆ ಇತರ ಕಂದಾಯ ವಿಭಾಗದ ಅಧಿಕಾರಿಗಳು ಕಾರ್ಯಕ್ರಮದಲ್ಲಿ ಪಾಲ್ಗೊಳ್ಳುವವರಿಗೆ ಸ್ವಾಗತ ಬಯಸಲಿದ್ದಾರೆ.

## ಸಮರ್ಪಣೆ ಸಂಕಲ್ಪ ಬೈಕ್ ರ್‍ಯಾಲಿ

### ಸಾರಿಗೆ ನಿಯಮ ಪಾಲಿಸಿದ ಡಿಸಿಎಂ ಡಿ.ಕೆ.ಶಿವಕುಮಾರ್



**■ ಹಂಪಿ ಟೈಮ್ಸ್ ಹೊಸಪೇಟೆ**

'ಪ್ರಗತಿಯತ್ತ ಕರ್ನಾಟಕ – ಸಮರ್ಪಣೆ ಸಂಕಲ್ಪ' ಎರಡು ವರ್ಷಗಳ ಜನಪರ ಸಾಧನೆಯ ಸಮರ್ಪಣೆ ಮತ್ತಷ್ಟು ಜನಪರ ಸೇವೆಯ ಪ್ರತಿಜ್ಞೆ ಎಂಬ ಧ್ಯೇಯವಾಕ್ಯದಡಿ ಒಂದು ಲಕ್ಷ ಕುಟುಂಬಗಳಿಗೆ ನೆಮ್ಮದಿ ಕಂದಾಯ ಗ್ರಾಮ ಹಕ್ಕು ಪತ್ರ ವಿತರಣೆ ಕಾರ್ಯಕ್ರಮ ನಿಮಿತ್ತವಾಗಿ ಬೈಕ್ ರ್‍ಯಾಲಿಯನ್ನು ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರು ಸೋಮವಾರ ಚಾಲನೆ ನೀಡುವ ಮೂಲಕ ರ್‍ಯಾಲಿಯಲ್ಲಿ ಭಾಗವಹಿಸಿದರು.

ನಗರದ ಜಿಲ್ಲಾ ಕ್ರೀಡಾಂಗಣದಿಂದ ಆರಂಭವಾದ ಬೈಕ್ ರ್‍ಯಾಲಿ, ವಿವಿಧ ಪ್ರಮುಖ ಬೀದಿಗಳ ಮೂಲಕ ಕೆಎಸ್‌ಆರ್‌ಟಿಸಿ ಬಸ್ ನಿಲ್ದಾಣ ಮಾರ್ಗವಾಗಿ ಗಾಂಧಿ ಚೌಕ್‌ವರೆಗೆ ನಡೆಸಲಾಯಿತು. ರ್‍ಯಾಲಿಯಲ್ಲಿ ವಿಜಯನಗರ ಜಿಲ್ಲಾ ಉಸ್ತುವಾರಿ ಸಚಿವ ಬಿ.ಜೆಡ್.ಜಮೀರ್ ಅಹ್ಮದ್ ಖಾನ್, ಸಂಸದ ಈ.ತುಕಾರಾಮ್, ಶಾಸಕ ಹೆಚ್.ಆರ್.ಗವಿಯಪ್ಪ, ಕೂಡ್ಲಿಗಿ ಶಾಸಕ ಡಾ.ಎನ್.ಟಿ.ಶ್ರೀನಿವಾಸ್, ಕಂಪ್ಲಿ ಶಾಸಕ ಜೆ.ಗಣೇಶ್, ಕೆಎಂಎಫ್ ಅಧ್ಯಕ್ಷ ಭೀಮಾನಾಯ್ಕ, ನೂರಾರು ಯುವಕರು ಭಾಗವಹಿಸಿದ್ದರು.



**ಸಿಎಂ ಸಿದ್ದರಾಮಯ್ಯನವರು ಮಂಗಳವಾರ ಬೆಳಿಗ್ಗೆ 9 ಗಂಟೆಗೆ ಬೆಂಗಳೂರಿನಿಂದ ವಿಶೇಷ ವಿಮಾನದ ಮೂಲಕ 9.50 ಕ್ಕೆ ತೋರಣಗಲ್ಲಿನ ಜಿಂದಾಲ್ ಏರ್‌ಸ್ಟ್ರಿಪ್‌ಗೆ ಆಗಮಿಸಿ, ಜಿಂದಾಲ್ ಏರ್‌ಸ್ಟ್ರಿಪ್‌ನಿಂದ ಹೆಲಿಕಾಪ್ಟರ್ ಮೂಲಕ 11:30ಕ್ಕೆ ಹೊಸಪೇಟೆ ನಗರದ ಭಟ್ಟರಹಳ್ಳಿ ಆಂಜನೇಯ ಸ್ವಾಮಿ ದೇವಸ್ಥಾನದ ಆವರಣದಲ್ಲಿ ಹೆಲಿಪ್ಯಾಡ್‌ಗೆ ಬಂದಿಳಿಯಲಿದ್ದಾರೆ.**

## ಬಸ್ ಸೇವೆಗಳಲ್ಲಿ ವ್ಯತ್ಯಯ

**ಹೊಸಪೇಟೆ:** ನಗರದಲ್ಲಿ ಮೇ.20 ರಂದು ಪ್ರಗತಿಯತ್ತ ಕರ್ನಾಟಕ ಸಮರ್ಪಣಾ ಸಂಕಲ್ಪ ಕಾರ್ಯಕ್ರಮದ ನಿಮಿತ್ತ ಸಾಂಧರ್ಬಿಕ ಒಪ್ಪಂದದ ಮೇಲೆ ಹೊಸಪೇಟೆ ವಿಭಾಗದ ಬಸ್‌ಗಳನ್ನು ಜಿಲ್ಲಾಡಳಿತಕ್ಕೆ ಒದಗಿಸ ಬೇಕಾಗಿರುತ್ತದೆ. ಹಾಗಾಗೀ ಅಂದು ಹೊಸಪೇಟೆ ವಿಭಾಗದ ನಾನಾ ಘಟಕಗಳ ವ್ಯಾಪ್ತಿಯಲ್ಲಿನ ವಿವಿಧ ಮಾರ್ಗಗಳ ವಾಹನ ಗಳ ಕಾರ್ಯಾಚರಣೆಯಲ್ಲಿ ವ್ಯತ್ಯಯ ಉಂಟಾಗಲಿದೆ, ಪ್ರಯಾಣಿಕರ ಸಹಕರಿಸಬೇಕೆಂದು ವಿಭಾಗೀಯ ನಿಯಂತ್ರಣಾಧಿಕಾರಿ ತಿಮ್ಮಾರೆಡ್ಡಿ ಹೀರಾ ತಿಳಿಸಿದ್ದಾರೆ.




## ದೇವಾಲಯ ದರ್ಶನ



ಹಂಪಿ ಶ್ರೀ ವಿರೂಪಾಕ್ಷೇಶ್ವರ ದರ್ಶನ

ನಿತ್ಯ ಅಭಿಷೇಕ ಸಮಯ
ಬೆಳಿಗ್ಗೆ: 6:30, 10:30 ಸಂಜೆ 6:30ಕ್ಕೆ

–: ದರ್ಶನ ಸಮಯ :–
ಬೆಳಿಗ್ಗೆ 6.30 ರಿಂದ ಮಧ್ಯಾಹ್ನ 1.15ರವರೆಗೆ
ಮಧ್ಯಾಹ್ನ 3 ರಿಂದ ರಾತ್ರಿ 7.30ರವರೆಗೆ

## ಆನಂದ ಬಾಣ




ಮನಸ್ಸು ಎಲ್ಲದಕ್ಕೂ ಮೂಲ,
ಅದನ್ನು ಸರಿಪಡಿಸಿಕೊಳ್ಳದ ಹೊರತು
ಇನ್ನಾವುದು ಸರಿಯಾಗದು
– ಡಿ.ವಿ.ಜಿ




ಹಂಪಿ ಟೈಮ್ಸ್
HAMPI TIMES

# ಮಳೆಗೆ ಹಾನಿಗೀಡಾದ ಪ್ರದೇಶಗಳಿಗೆ ಸಿಎಂ ಭೇಟಿ, ಮೇ 21ರಂದು ನಗರ ಪ್ರದಕ್ಷಿಣೆ : ಮುಖ್ಯಮಂತ್ರಿ ಸಿದ್ದರಾಮಯ್ಯ



**ಹಂಪಿ ಟೈಮ್ಸ್ ಬೆಂಗಳೂರು**

ಸಂಜೆ ವೇಳೆ ಸಂಚಾರ ದಟ್ಟಣೆ ಹೆಚ್ಚಿರುವ ಕಾರಣ ಜನರಿಗೆ ತೊಂದರೆಯಾಗುತ್ತದೆ ಎಂದು ಮನಗಂಡು ಇಂದು ಕೆಲವು ಸ್ಥಳಗಳಿಗೆ ಭೇಟಿ ನೀಡಲಾಗಿದೆ. ನಾಳಿದ್ದು ಇಡೀ ದಿನ ಉಪಮುಖ್ಯಮಂತ್ರಿಗಳು ಹಾಗೂ ಬೆಂಗಳೂರಿನ ಶಾಸಕರೊಂದಿಗೆ ನಗರ ಪ್ರದಕ್ಷಿಣೆ ಮಾಡಲಾಗುವುದು ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ತಿಳಿಸಿದರು.

ಅವರು ಸೋಮವಾರ ಮಳೆಯಿಂದ ಹಾನಿಗೊಳಗಾದ ಪ್ರದೇಶಗಳಿಗೆ ಭೇಟಿ ನೀಡಿ ನಂತರ ಮಾಧ್ಯಮಗಳೊಂದಿಗೆ ಮಾತನಾಡಿದರು. ಸೂಕ್ಷ್ಮ ಪ್ರದೇಶಗಳಿಗೆ ಭೇಟಿ ನೀಡಿ ಜನರ ಅಹವಾಲುಗಳನ್ನು ಆಲಿಸಲಾಗುವುದು. ಅಧಿಕಾರಿಗಳು ಏನು ಮಾಡುತ್ತಿದ್ದಾರೆ ಎನ್ನುವುದನ್ನು ಪರಿಶೀಲಿಸಿ ಅಗತ್ಯ ಸೂಚನೆಗಳನ್ನು ಕೊಡಲಾಗುವುದು ಎಂದರು.

**ಈವರೆಗೆ 491 ಕಿಮಿ ಉದ್ದದ ರಾಜಕಾಲುವೆಗಳಿಗೆ ತಡೆಗೋಡೆ ನಿರ್ಮಾಣ**

ನಗರದಲ್ಲಿ ರಾಜಕಾಲುವೆಗಳು ಒತ್ತುವರಿಯಾಗಿದ್ದು, ಚರಂಡಿಗಳು ಆಳವಿಲ್ಲದೆ ಚಿಕ್ಕದಾಗಿರುವುದಲ್ಲದೆ ಹೂಳು ತುಂಬಿದೆ. ಇದನ್ನು ತೆರವು ಮಾಡಲು ನಗರಪಾಲಿಕೆಯವರಿಗೆ ಅನೇಕ ಬಾರಿ ಸೂಚನೆ ನೀಡಲಾಗಿದ್ದು, ಇನ್ನೂ ಕಾಮಗಾರಿಗಳು ನಡೆಯುತ್ತಿವೆ. 859.90 ಕಿ. ಮಿ ಉದ್ದದ ರಾಜಕಾಲುವೆಗಳು ಇವೆ. ಇಲ್ಲಿಯವರೆಗೆ 491 ಕಿಮಿ ಉದ್ದದ ರಾಜಕಾಲುವೆಗಳಿಗೆ ತಡೆಗೋಡೆ ನಿರ್ಮಿಸಲಾಗಿದೆ. 195 ಉದ್ದದಲ್ಲಿ ತಡೆಗೋಡೆ ನಿರ್ಮಾಣ ಕಾರ್ಯ ಚಾಲ್ತಿಯಲ್ಲಿದ್ದು, 173 ಕಿ.ಮಿ ಉದ್ದದ ರಾಜಕಾಲುವೆಗಳನ್ನು ವರ್ಲ್ಡ್ ಬ್ಯಾಂಕ್ ವತಿಯಿಂದ ಕೈಗೊಳ್ಳಲಾಗಿದ್ದು, ರಾಜಕಾಲುವೆ ಕಾರ್ಯ ಪ್ರಗತಿಯಲ್ಲಿದೆ. ರಾಜಕಾಲುವೆಗಳಾಗದೆ ರಸ್ತೆಗಳಲ್ಲಿ ನೀರು ನಿಲ್ಲುವುದನ್ನು ತಪ್ಪಿಸುವುದು ಕಷ್ಟ. ಬೆಂಗಳೂರು ನಗರದಲ್ಲಿ ಸುಮಾರು 210 ತಗ್ಗು ಪ್ರದೇಶಗಳನ್ನು ಸೂಕ್ಷ್ಮ ಮತ್ತು ಅತಿ ಸೂಕ್ಷ್ಮ ಎಂದು ಗುರುತು ಮಾಡಲಾಗಿದೆ. 166 ಸೂಕ್ಷ್ಮ ಮತ್ತು ಅತಿಸೂಕ್ಷ್ಮ ಕಾಮಗಾರಿಗಳನ್ನು ನಿರ್ವಹಿಸಲಾಗಿದೆ. ಬಾಕಿ 44 ಪ್ರದೇಶಗಳಲ್ಲಿ ತಾತ್ಕಾಲಿಕ ಕ್ರಮಗಳನ್ನು ಕೈಗೊಳ್ಳಲಾಗಿದೆ. ಈ ಪೈಕಿ 24 ಕಾಮಗಾರಿ ಪ್ರಗತಿಯಲ್ಲಿದ್ದು, ಇವು ಪೂರ್ಣಗೊಂಡರೆ ಈ ಸಮಸ್ಯೆ ಬಹಳಷ್ಟು ಕಡಿಮೆಯಾಗಲಿದೆ ಎಂದು ಮುಖ್ಯಮಂತ್ರಿಗಳು ತಿಳಿಸಿದರು.

**ಮಹಿಳೆ ಸಾವು:* ಪರಿಹಾರ ಘೋಷಣೆ:** ವೈಟ್ ಫೀಲ್ಡ್ ನಲ್ಲಿ ಮಹಿಳೆಯೊಬ್ಬರು ಸಾವಿಗೀಡಾಗಿದ್ದು, ಸರ್ಕಾರದ ವತಿಯಿಂದ 5 ಲಕ್ಷ ರೂ.ಗಳ ಪರಿಹಾರವನ್ನು ನೀಡುವುದಾಗಿ ಸಿಎಂ ಘೋಷಿಸಿದರು.

**ರಾಜಕಾಲುವೆಗಳ ಕಾಮಗಾರಿ ಕೈಗೊಳ್ಳಲಾಗಿದೆ:** ಸಂಚಾರಿ ಪೊಲೀಸರು 132 ಸ್ಥಳಗಳನ್ನು ಗುರುತಿಸಿದ್ದಾರೆ. ಈ ಪೈಕಿ 82 ಕಾಮಗಾರಿ ಪೂರ್ಣಗೊಂಡಿದ್ದು, 41 ಕಾಮಗಾರಿಗಳು ಬಾಕಿ ಇವೆ. ಈ ವರ್ಷ ಇಡೀ ಬೆಂಗಳೂರಿನ ರಾಜಕಾಲುವೆಗಳ ಕಾಮಗಾರಿಗಳನ್ನು ಕೈಗೆತ್ತಿಕೊಳ್ಳಲಾಗಿದೆ. ಸಿಲ್ಕ್ ಬೋರ್ಡ್ ಜಂಕ್ಷನ್, ಹೆಬ್ಬಾಳ ಜಂಕ್ಷನ್ ಬಳಿ ಅತಿ ಹೆಚ್ಚು ಮಳೆಯಾಗಿದ್ದು, ನೀರು ಹರಿದುಹೋಗುವಂತೆ ದಾರಿ ಮಾಡಲು ರೈಲ್ವೆಯವರಿಗೆ ಕೆಲಸವನ್ನು ವಹಿಸಲಾಗಿದೆ ಎಂದು ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ವಿವರಿಸಿದರು.

**ಸಾರ್ವಜನಿಕರಿಗೆ ತೊಂದರೆಯಾಗದಂತೆ ಮರಗಳು ತೆರವು:** ಮರಗಳನ್ನು ಕೂಡಲೇ ತೆರವು ಮಾಡಲು ಖಾಯಂ ತಂಡಗಳಿವೆ. ಸಾರ್ವಜನಿಕರಿಗೆ ತೊಂದರೆಯಾಗದಂತೆ ಕಾಮಗಾರಿ ಕೈಗೊಳ್ಳಲಾಗುವುದು ಎಂದರು.

**ಕಾನೂನಿನ ದೃಷ್ಟಿಯಲ್ಲಿ ಎಲ್ಲರೂ ಸಮಾನರು:** ಕಾನೂನಿನ ದೃಷ್ಟಿಯಲ್ಲಿ ಎಲ್ಲರೂ ಒಂದೇ. ಸರ್ಕಾರ ಶ್ರೀಮಂತರು, ಬಡವರು ಎಂದು ತಾರತಮ್ಯ ಮಾಡುವುದಿಲ್ಲ ಎಂದು ಮುಖ್ಯಮಂತ್ರಿಗಳು ಸುದ್ದಿಗಾರರ ಪ್ರಶ್ನೆಗೆ ಉತ್ತರಿಸಿದರು.

**ಒತ್ತುವರಿಯಾಗದಂತೆ ತಡೆಯಲು ಸೂಚನೆ:** 4292 ಒತ್ತುವರಿಯಾಗಿದ್ದು , ಈ ಪೈಕಿ 2326 ಒತ್ತುವರಿಯನ್ನು ತೆರವುಗೊಳಿಸಲಾಗಿದೆ. ಒತ್ತಿವರಿಯಾಗದಂತೆ ನೋಡಿಕೊಳ್ಳಲು ಸೂಚನೆಯನ್ನು ನೀಡಲಾಗಿದೆ ಎಂದರು.

## ನೀವೂ ಬರೆಯಬಹುದು

ಹಂಪಿ ಟೈಮ್ಸ್ ಪತ್ರಿಕೆ ಆರಂಭಿಸಿದ್ದು ನಾವಾದರೂ, ಕೈಹಿಡಿದು ನಡೆಸುವವರು ನೀವು. ನಮ್ಮ ಇಚ್ಛೆಯೂ ಒಳಗೊಂಡಂತೆ ನಿಮ್ಮ ಆಶಯಗಳಿಗೆ ತಕ್ಕಂತೆ ಪತ್ರಿಕೆಯನ್ನು ರೂಪಿಸುವ ಹೊಣೆಗಾರಿಕೆ, ಜವಾಬ್ದಾರಿಯೂ ನಮ್ಮದಾಗಿದೆ. ಇಲ್ಲಿ ಕೇವಲ ನಮ್ಮ ಬರವಣಿಗೆ ಅಷ್ಟೇ ಅಲ್ಲದೇ, ಬರಹಗಾರರಾಗಿದ್ದರೆ ನೀವೂ ಕೂಡ ನಿಮ್ಮ ಬರಹವನ್ನಿಲ್ಲಿ ಓದಬಹುದು. ಈ ನಿಟ್ಟಿನಲ್ಲಿ ನಿಮ್ಮಿಂದ ಕತೆ, ಕವನ, ವಿವಿಧ ಪ್ರಕಾರದ ಸಾಹಿತ್ಯ ಹಾಗೂ ಮಹಿಳಾ ಮತ್ತು ಮಕ್ಕಳ ಪರ ಚಿಂತನೆ ಒಳಗೊಂಡ ಲೇಖನಗಳನ್ನು ನಾವು ನಿರೀಕ್ಷಿಸುತ್ತಿದ್ದೇವೆ. ಜೊತೆಗೆ ಬಹುಮುಖ್ಯವಾಗಿ ಈ ನೆಲದ ಜನರ ಧ್ವನಿಯಾಗುವ ಹಂಬಲದಿಂದ ಸಾರ್ವಜನಿಕ ಕುಂದು ಕೊರತೆಗಳನ್ನು ಹೇಳಿಕೊಳ್ಳಬಹುದು. ಓದುಗ ಪ್ರಭುಗಳಾದ ನೀವು ಪತ್ರಿಕೆಯ ಭಾಗವೂ ಹೌದು. ಹೀಗಾಗಿ ನಿಮ್ಮ ಪ್ರತಿಕ್ರಿಯೆಯೂ ನಮಗೆ ಅತ್ಯಮೂಲ್ಯ. **ಕಥೆ, ಕವನ, ಸಾಹಿತ್ಯ, ತಂತ್ರಜ್ಞಾನ, ಆರೋಗ್ಯ, ಶಿಕ್ಷಣ, ಕ್ರೀಡೆ, ಕೃಷಿ, ಅಪರೂಪದ ವ್ಯಕ್ತಿಗಳು, ಅಂಕಣ, ಮಹಿಳೆ ಮತ್ತು ಮಕ್ಕಳು ಸೇರಿದಂತೆ ವಿವಿಧ ಕ್ಷೇತ್ರಗಳ** ಕುರಿತಾದ ನಿಮ್ಮ ಬರಹಗಳನ್ನೆಲ್ಲ ಸ್ವೀಕರಿಸುತ್ತೇವೆ ಆದರೆ, ಕಳುಹಿಸಿದ ಬರಹಗಳಲ್ಲಿ ಸಮಂಜಸ ಎನಿಸುವುದಷ್ಟೇ ಪ್ರಕಟಿಸುತ್ತೇವೆ. ನಮ್ಮ ನಂಬುಗೆಯ ಸಮಾಜಕ್ಕಾಗಿ ಒಳಿತನ್ನೇ ಬಯಸುತ್ತ, ಬರೆಯುತ್ತ ಎಲ್ಲರೂ ಒಳ ಗೊಳ್ಳೋಣ.

–: ಸಂಪಾದಕರು :–

ಹಂಪಿ ಟೈಮ್ಸ್, ಶ್ರೀ ಓಂಕಾರೇಶ್ವರ ದೇವಸ್ಥಾನದ ಪಕ್ಕದಲ್ಲಿ, ವಾಲ್ಮೀಕಿ ವೃತ್ತದ ಹತ್ತಿರ, ಹೊಸಪೇಟೆ, ವಿಜಯನಗರ ಜಿಲ್ಲೆ.
ಇ–ಮೇಲ್:hampitimes@gmail.com
M: 94486 33038

## ಓದುಗರ ಗಮನಕ್ಕೆ

ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತುಲೋಪ, ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರ ರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.
– ಜಾಹೀರಾತು ವ್ಯವಸ್ಥಾಪಕರು.

# ಕುಸ್ತಿಗೆ ಶಕ್ತಿ ತುಂಬಲಿ ಸರ್ಕಾರ

## ರೈಲ್ವೆ ಇಲಾಖೆಯಲ್ಲಿ ರಾಷ್ಟ್ರೀಯ ಕರ್ನಾಟಕ ಕುಸ್ತಿಪಟು ಪಾಲಾಕ್ಷ ಗೌಡ

ತಂದೆ–ಶರಣಗೌಡ ಬೇಲೇರಿ ತಾಯಿ–ಗಿರಿಜಾ ಇವರ ಮೊದಲನೇ ಮಗನಾಗಿ ಲಕ್ಕುಂಡಿ ಗದಗ ತಾಲೂಕು ಮತ್ತು ಜಿಲ್ಲೆಯಲ್ಲಿ ಪಾಲಾಕ್ಷ ಗೌಡ ರವರು ಜನಿಸಿರುತ್ತಾರೆ.ಇವರು ತಮ್ಮ ವಿದ್ಯಾಭ್ಯಾಸವನ್ನು 01–10ನೇ ತರಗತಿವರೆಗೆ ಗದಗದಲ್ಲಿನ ಸರ್ಕಾರಿ ಪ್ರಾಥಮಿಕ ಮತ್ತು ಪ್ರೌಢಶಾಲೆಗಳಲ್ಲಿ ಅಭ್ಯಾಸ ಮಾಡಿರುತ್ತಾರೆ ಮುಂದುವರೆದು ಪ್ರಥಮ ಮತ್ತು ದ್ವಿತೀಯ ಪಿಯುಸಿ ಧಾರವಾಡದಲ್ಲಿ ಪೂರ್ಣಗೊಳಿಸಿರುತ್ತಾರೆ.

ಇಡಿ ಕುಟುಂಬವೇ ಕ್ರೀಡಾ ಕುಟುಂಬವಾದ ಪ್ರಯುಕ್ತ ತಮ್ಮ ಬಾಲ್ಯದಲ್ಲಿಯೇ ತಂದೆಯವರ ಮಾರ್ಗದರ್ಶನದಲ್ಲಿ ಕುಸ್ತಿ ಕ್ರೀಡೆಯಲ್ಲಿ ಪಳಗಿ ನಂತರ 10ನೇ ತರಗತಿ ಮುಗಿಸಿದ ತರುವಾಯ 2012ರಲ್ಲಿ ಹೆಚ್ಚಿನ ತರಬೇತಿಗಾಗಿ ಧಾರವಾಡದ ಸಾಯಿ ಕುಸ್ತಿ ಹಾಸ್ಟೆಲಿನಲ್ಲಿ ಸೇರಿಕೊಳ್ಳುತ್ತಾರೆ.

ಇವರಿಗೆ ಕರ್ನಾಟಕ ರಾಜ್ಯದ ಹೆಸರಾಂತ ಕುಸ್ತಿ ತರಬೇತುದಾರರಾದ ಪಾಂಡವಪುರದ ಶ್ರೀನಿವಾಸ ಗೌಡ ಇವರು ತರಬೇತಿಯನ್ನು ಮುಂದುವರಿಸುತ್ತಾರೆ. ತಂದೆ ಶರಣ ಗೌಡ ಬೇಲೇರಿ ಕುಸ್ತಿ ತರಬೇತುದಾರರು ಗದಗ ಇವರೇ ಪ್ರೇರಣೆ ಇವರ ಮಾರ್ಗದರ್ಶನದಲ್ಲಿ ಪ್ರಾಥಮಿಕ ಕುಸ್ತಿ ಕೌಶಲ್ಯಗಳನ್ನು ಕಲಿತು ನಂತರ ಶ್ರೀನಿವಾಸ್ ಗೌಡ ರವರ ವೈಜ್ಞಾನಿಕ ಮಾರ್ಗದರ್ಶನದ ಜೊತೆಜೊತೆಗೆ ಹಲವು ರಾಜ್ಯಮಟ್ಟದ ರಾಷ್ಟ್ರಮಟ್ಟದ ಕುಸ್ತಿಯಲ್ಲಿ ಭಾಗವಹಿಸಿ ಪದಕಗಳನ್ನು ಗಳಿಸಿರುತ್ತಾರೆ.ನಂತರ ಜೆಎಸ್ಡಬ್ಲ್ಯೂ ನಲ್ಲಿ ತರಬೇತಿಯನ್ನು ಡೊಮನ್ ಫ್ರಾನ್ಸ್ ದೇಶದ ಕುಸ್ತಿ ತರಬೇತುದಾರರು 2017ರಲ್ಲಿ ಪಳಗಲು ಪ್ರಾರಂಭಿಸಿ ಮುಂದುವರೆದ ಕೌಶಲ್ಯಗಳು ಹಾಗೂ ವೈಜ್ಞಾನಿಕ ತರಬೇತಿ ಅಂತರಾಷ್ಟ್ರೀಯ ಚಾಂಪಿಯನ್ ಶಿಪ್ಗಳ ಮಾರ್ಗದರ್ಶನವನ್ನು ಪಡೆದು ರಾಷ್ಟ್ರಮಟ್ಟದಲ್ಲಿ ಪದಕಗಳನ್ನು ಗಳಿಸಿರುತ್ತಾರೆ.


ತಂದೆಯವರ ಮಾರ್ಗದರ್ಶನ ಮತ್ತು ಸಲಹೆಯಿಂದ ಹತ್ತಕ್ಕೂ ಹೆಚ್ಚು ಜನ ಸರ್ಕಾರಿ ಉದ್ಯೋಗಗಳನ್ನು ಪಡೆದಿದ್ದಾರೆ ಅವರ ಪ್ರಯತ್ನ, ಮಾರ್ಗದರ್ಶನ, ಪ್ರೇರಣೆ ನಮ್ಮೆಲ್ಲರಿಗೂ ಪೂರಕ ಇಂದು ಅವರನ್ನು ನಾವೆಲ್ಲರೂ ಕಳೆದು ಕೊಂಡಿದ್ದೇವೆ ಇದರಿಂದ ಕರ್ನಾಟಕ ಕುಸ್ತಿ ಕೂಡ ಒಂದಿಷ್ಟು ನಷ್ಟವನ್ನು ಅನುಭವಿಸಿದೆ ಎಂದು ಹೇಳಿದರೆ ತಪ್ಪಾಗಲಾರದು ಎಂದು ತಮ್ಮ ಬೇಸರವನ್ನು ವ್ಯಕ್ತಪಡಿಸುತ್ತಾರೆ ಪಾಲಾಕ್ಷ ಗೌಡ.



ಡಾ.ಸುಧಾಕರ ಜಿ.ಲಕ್ಕವಳ್ಳಿ
ಲೇಖಕರು 8747969381

Scan For Digital Colourful
HAMPI TIMES E-paper

ವ`ುುಂಬರ`ುವ` ಕುಸ್ತಿಪಟುಗಳು ಹಾಗೂ ಈಗ ತರಬೇತಿ ಪಡೆಯುತ್ತಿ ರುವ ತರುಣರು ಕುಸ್ತಿಯ ಜೊತೆ ಜೊತೆಗೆ ವಿದ್ಯಾಭ್ಯಾ ಸದ ಕಡೆಗೆ ಗಮನ ನೀಡಬೇಕು ಕಾರಣ ವಿದ್ಯೆ ಮತ್ತು ಕ್ರೀಡೆ ಒಂದೇ ನಾಣ್ಯದ ಎರಡು ಮುಖಗಳಿದ್ದಂತೆ ಎರಡು ಸರಿಯಾಗಿದ್ದರೆ ಮಾತ್ರ ಚಲಾವಣೆಗೆ ಬರುತ್ತದೆ ಒಂದು ಹೆಚ್ಚು ಇನ್ನೊಂದು ಕಡಿಮೆ ಇರಬಾರದು ಸರ್ಕಾರಿ ಉದ್ಯೋಗವನ್ನು ಪಡೆಯಲು ಕನಿಷ್ಠ ದ್ವಿತೀಯ ಪಿಯುಸಿ ಪಾಸ್ ಆಗಿರಬೇಕು ಮೊದಲಿನಂತೆ ಈಗ ಸರ್ಕಾರಿ ಉದ್ಯೋಗಗಳು ದೊರೆಯುತ್ತಿಲ್ಲ ಆದಕಾರಣ ಯುವ ಕುಸ್ತಿಪಟುಗಳು ಓದನ್ನು ಕೂಡ ದೈನಂದಿನ ಬದುಕಿನಲ್ಲಿ ಅಳವಡಿಸಿಕೊಳ್ಳಬೇಕು.



ಕನಿಷ್ಠ ರಾಷ್ಟ್ರಮಟ್ಟದ ಪದಕವನ್ನು ಪಡೆದು ಜೊತೆಗೆ ದ್ವಿತೀಯ ಪಿಯುಸಿ ಪಾಸ್ ಆಗಲೇಬೇಕು ಆಗ ಮಾತ್ರ ಉದ್ಯೋಗ ಪಡೆಯಲು ಕುಸ್ತಿಪಟುಗಳು ಅರ್ಹರಾಗುತ್ತಾರೆ.

ರಾಷ್ಟ್ರ ಅಂತರಾಷ್ಟ್ರೀಯ ಪದಕ ಗಳಿಸಿದ ಕುಸ್ತಿಪಟುಗಳು ತರಬೇತುದಾರರಾಗಲು ಕೂಡ ಅವಕಾಶ ಇದೆ ಆದರೆ ಕನಿಷ್ಠ ಯಾವುದಾದರು ವಿಶ್ವವಿದ್ಯಾಲಯದಿಂದ ಪದವಿ

ಪಡೆದಿರಬೇಕು.ಹೆಚ್ಚಿನ ಕ್ರೀಡಾ ಸಾಧನೆಗಳು ಮಾಡಿ ವಿದ್ಯಾಭ್ಯಾಸ ಮಾಡಲಿಲ್ಲ ಎಂದರೆ ಅದು ಕೂಡ ವ್ಯರ್ಥ ಮುಂದೆ ಉದ್ಯೋಗದಲ್ಲಿ ಮುಂಬಡ್ತಿ ಲಭ್ಯವಾಗುವುದಿಲ್ಲ.ಕಡಿಮೆ ಸಾಧನೆ ಮಾಡಿದ ಕ್ರೀಡಾಪಟುಗಳು ವಿದ್ಯಾಭ್ಯಾಸದಲ್ಲಿ ಮುಂದುವರೆದು ಮುಂಬಡ್ತಿ ಪಡೆದು ಉನ್ನತ ಹುದ್ದೆ ಅಲಂಕರಿಸಿರುವ ಉದಾಹರಣೆಗಳು ಉಂಟು ಆದ್ದರಿಂದ ಓದು ಮತ್ತು ಕ್ರೀಡೆ ಎರಡನ್ನು ಉತ್ತಮವಾಗಿ ಪಡೆದುಕೊಳ್ಳುವುದು ಅನಿವಾರ್ಯ ಮತ್ತು ಸಾಧ್ಯ.

ಕರ್ನಾಟಕದ ಕುಸ್ತಿಪಟುಗಳು ಡಿ ವೈ ಈ ಎಸ್ ಕ್ರೀಡಾ ನಿಲಯಗಳಲ್ಲಿ ತರಬೇತಿಯನ್ನು ಪಡೆಯುತ್ತಾರೆ 21 ವಯಸ್ಸಿನ ನಂತರ ಕ್ರೀಡಾ ನಿಲಯದ ಉಚಿತ ತರಬೇತಿ ಪಡೆಯಲು ಹಾಗೂ ವಸತಿ,ಊಟದ ಸೌಕರ್ಯವನ್ನು ಕಳೆದುಕೊಳ್ಳುತ್ತಾರೆ ಮುಂದೆ ಒಂದು ಅಥವಾ ಎರಡು ವರ್ಷಗಳ ಕಾಲ ತಮ್ಮ ಸ್ವಂತ ದುಡಿಮೆಯಲ್ಲಿ ಕುಸ್ತಿಯನ್ನು ಮುಂದುವರಿಸುತ್ತಾರೆ ಕಾರಣಾಂತರಗಳಿಂದ ಹಲವರಿಗೆ ಇದು ಸಾಧ್ಯವಾಗದೆ ಕುಸ್ತಿಯನ್ನು ಬಿಡುತ್ತಾರೆ.

ಸರ್ಕಾರ ಈಗಾಗಲೇ ಹಲವು ಸವಲತ್ತುಗಳನ್ನು ಕ್ರೀಡಾಪಟುಗಳಿಗೆ ನೀಡುತ್ತಿದೆ ಮುಂದುವರೆದು ಸರ್ಕಾರ ಕ್ರೀಡಾಪಟುಗಳಿಗೆ ಹೆಚ್ಚಿನ ಉದ್ಯೋಗ ವನ್ನು ಸೃಷ್ಟಿಕರಿಸಿ ಅವಕಾಶ ಕಲ್ಪಿಸಬೇಕು ಜೊತೆಜೊತೆಗೆ ಕುಸ್ತಿ ಅಕಾಡೆಮಿಗಳನ್ನು ತೆರೆಯಲು ಆರ್ಥಿಕ ಸಹಕಾರದೊಂದಿಗೆ ಕೈಜೋಡಿಸಬೇಕು ಹೆಸರಾಂತ ಪೈಲ್ವಾನರುಗಳು ಅಖಾಡಗಳನ್ನು ತೆರೆದು ತರಬೇತಿಯನ್ನು ನೀಡಬೇಕು ಆಗ ಮಾತ್ರ ಕುಸ್ತಿ ಕ್ರೀಡೆಯನ್ನು ಉಳಿಸಲು ಮತ್ತು ಕುಸ್ತಿಪಟುಗಳನ್ನು ಕಾಪಾಡಿಕೊಳ್ಳಬಹುದು ಎನ್ನುತ್ತಾರೆ ಪಾಲಾಕ್ಷಗೌಡ.

ಸದ್ಯ ವಾರಣಾಸಿಯ ರೈಲ್ವೆ ಇಲಾಖೆಯ ಪಂಡಿತ್ ದೀನದಯಾಳ್ ಉಪಾಧ್ಯಾಯ ಡಿ ಆರ್ ಎಂ ಆಫೀಸ್ ನಲ್ಲಿ ಸೀನಿಯರ್ ಕ್ಲಾಕ್ ಆಗಿ ಉದ್ಯೋಗವನ್ನು ನಿರ್ವಹಿಸುತ್ತಾ ಕಠಿಣ ತರಬೇತಿಯನ್ನು ಪಡೆಯುತ್ತಿದ್ದಾರೆ.ಸೇವೆಯ ಜೊತೆಗೆ ದಿನನಿತ್ಯ ಇಲಾಖೆ ನೀಡುವ ಬಿಡುವಿನಲ್ಲಿ ತರಬೇತಿಯನ್ನು ಮುಂದುವರಿಸಿ ರೈಲ್ವೆ ಇಲಾಖೆಗೆ ಪದಕ ತಂದುಕೊಡಲು ಶ್ರಮಿಸುತ್ತಿದ್ದಾರೆ ರೈಲ್ವೆ ಇಲಾಖೆ ನಡೆಸುವ ಜೋನ್ ಲೆವೆಲ್ ನಲ್ಲಿ ಪದಕವನ್ನು ಗಳಿಸಿ ರಾಷ್ಟ್ರಮಟ್ಟದ ಕುಸ್ತಿ ಸ್ಪರ್ಧೆಗೆ ಆಯ್ಕೆಗೊಂಡು ಪಂದ್ಯಾವಳಿಗಳಲ್ಲಿ ಪಾಲ್ಗೊಳ್ಳುತ್ತಾರೆ.

ರೈಲ್ವೆ ಇಲಾಖೆಯಲ್ಲಿ ಕ್ರೀಡಾಕೂಟದಲ್ಲಿ ಉದ್ಯೋಗ ಪಡೆಯಲು ಇಚ್ಛಿಸುವ ಕ್ರೀಡಾಪಟುಗಳಿಗೆ ಕನಿಷ್ಠ 12ನೇ ತರಗತಿ ಓದಿರಲೇಬೇಕು ಜೊತೆಗೆ ರಾಷ್ಟ್ರೀಯ ಕುಸ್ತಿ ಫೆಡರೇಷನ್, ವಿಶ್ವವಿದ್ಯಾನಿಲಯಗಳು ಆಯೋಜಿಸುವ ರಾಷ್ಟ್ರಮಟ್ಟದ ಕುಸ್ತಿ ಕ್ರೀಡೆಯಲ್ಲಿ ಪದಕವನ್ನು ಪಡೆಯಬೇಕು ಆಯ್ಕೆಯಲ್ಲಿ ದೈಹಿಕ ಸಾಮರ್ಥ್ಯ ಮತ್ತು ಆರೋಗ್ಯ ಪರೀಕ್ಷೆಯ ಹೊರತುಪಡಿಸಿ ಲಿಖಿತ ಪರೀಕ್ಷೆ ಸದ್ಯಕ್ಕೆ ಕ್ರೀಡಾಪಟುಗಳಿಗೆ ಇರುವುದಿಲ್ಲ ಹಾಗಾಗಿ ಸರಿಯಾದ ದೈಹಿಕ ಕ್ಷಮತೆ,ಆರೋಗ್ಯ ಕ್ಷಮತೆ ಕಾಪಾಡಿಕೊಳ್ಳಬೇಕು ಮುಂದೆ ಇಲಾಖೆಯಲ್ಲಿ ಬದಲಾಗುವ ನೇಮಕಾತಿ ನಿಯಮಗಳಿಗೆ ಸಿದ್ಧರಾಗಬೇಕು ಎಂದು ತಿಳಿಸುತ್ತಾರೆ.

2021–22 ರೈಲ್ವೆ ಇಲಾಖೆಯಲ್ಲಿ ಪದಕವನ್ನು ಪದಕ ಪಡೆದ ನಂತರ ಕ್ರೀಡಾ ಆಘಾತಕ್ಕೆ ಒಳಗಾಗಿ ಶಸ್ತ್ರ ಚಿಕಿತ್ಸೆ ,ತಂದೆಯವರ ಅಗಲಿಕೆ ಮಾನಸಿಕವಾಗಿ ಮತ್ತು ದೈಹಿಕವಾಗಿ ಸಾಕಷ್ಟು ಕುಗ್ಗಿ ಹೋದೆ. ಆದರೆ ನನ್ನ ಗುರಿ ಮರೆತಿಲ್ಲ ನನ್ನ ಮುಂದಿನ ಗುರಿ ಆಲ್ ಇಂಡಿಯಾ ರೈಲ್ವೆ ಇಲಾಖೆಗೆ ಪದಕ ಗಳಿಸಿಕೊಡಬೇಕೆಂಬುದು ಆ ನಿಟ್ಟಿನಲ್ಲಿ ಶ್ರಮಿಸುತ್ತಿದ್ದೇನೆ. ತಮ್ಮ ಬೆಳವಣಿಗೆಯಲ್ಲಿ ಸಹಕರಿಸಿದ ತಂದೆ,ತಾಯಿ, ತಮ್ಮ ಪ್ರಶಾಂತ್ ಬೇಲೇರಿ ಹಾಗೂ ಜೆ ಎಸ್ ಡಬ್ಲ್ಯೂ ನ ತರಬೇತುದಾರರಾದ ಸತ್ಯಪ್ಪ, ನನಗೆ ಕುಸ್ತಿ ಕಲಿಸಿಕೊಟ್ಟ ಎಲ್ಲಾ ತರಬೇತುದಾರರಿಗೆ, ಇಲಾಖೆಯ ವೃತ್ತಿಬಾಂಧವರಿಗೆ ಹಾಗೂ ಕುಟುಂಬ ವರ್ಗದವರಿಗೂ ಕೃತಜ್ಞನಾಗಿದ್ದೇನೆ ಎಂದು ತಿಳಿಸುತ್ತಾರೆ ಸಾಧಕ. ನಿಮ್ಮ ಗುರಿ ಸ್ಪಷ್ಟವಾಗಿದ್ದು ಸಾಧನೆ ಬಹುಬೇಗ ಈಡೇರಲಿ ಎಂದು ಹಾರೈಸುತ್ತೇವೆ.

### ಕ್ರೀಡಾ ಸಾಧನೆಗಳು

**2016 ಪಾಟ್ನಾದಲ್ಲಿ ನಡೆದ ಜೂನಿಯರ್ ನ್ಯಾಷನಲ್ ಕುಸ್ತಿ ಚಾಂಪಿಯನ್ಶಿಪ್ ನಲ್ಲಿ ಫ್ರೀ ಸ್ಟೈಲ್ ಮಾದರಿಯ 66 ಕೆಜಿ ದೇಹ ತೂಕ ವಿಭಾಗದ 20 ವಯೋಮಿತಿ ಒಳಗಿನ ಕುಸ್ತಿಯಲ್ಲಿ ಭಾಗವಹಿಸಿ ಕಂಚಿನ ಪದಕ ಪಡೆದಿರುತ್ತಾರೆ.**

**2017 ಆಲ್ ಇಂಡಿಯಾ ಇಂಟರ್ ಯುನಿವರ್ಸಿಟಿ ಹರಿಯಾಣ ಶಿರಸಾದಲ್ಲಿ ನಡೆದ ಕುಸ್ತಿ ಪಂದ್ಯಾವಳಿಯಲ್ಲಿ ಧಾರವಾಡ ವಿಶ್ವವಿದ್ಯಾನಿಲಯದ ಕ್ರೀಡಾಪಟುವಾಗಿ ಭಾಗವಹಿಸಿ 65 ಕೆಜಿ ದೇಹ ತೂಕ ವಿಭಾಗದಲ್ಲಿ ಫ್ರೀ ಸ್ಟೈಲ್ ಕುಸ್ತಿಯಲ್ಲಿ ಬೆಳ್ಳಿ ಪದಕ ಪಡೆದಿರುತ್ತಾರೆ.**

**2016 ಮತ್ತು 2017 ಆಲ್ ಇಂಡಿಯಾ ಇಂಟರ್ ಸಾಯಿ ಕುಸ್ತಿ ಪಂದ್ಯಾವಳಿ ಸೋನಿ ಪತ್ ಇಲ್ಲಿ ನಡೆದ ಕ್ರೀಡಾಕೂಟದಲ್ಲಿ 66 ಕೆಜಿ ದೇಹ ತೂಕ ವಿಭಾಗದ ಫ್ರೀ ಸ್ಟೈಲ್ ಮಾದರಿಯಲ್ಲಿ ಭಾಗವಹಿಸಿ ಚಿನ್ನದ ಪದಕ ಪಡೆದಿರುತ್ತಾರೆ.**

**2019 ಮತ್ತು 20 ನೇ ಸಾಲಿನ ಆಗ್ರಾದಲ್ಲಿ ನಡೆದ ಆಲ್ ಇಂಡಿಯಾ ರೈಲ್ವೆ ರಾಷ್ಟ್ರೀಯ ಕುಸ್ತಿ ಚಾಂಪಿಯನ್ಶಿಪ್ ನಲ್ಲಿ ಭಾಗವಹಿಸಿ ಫ್ರೀ ಸ್ಟೈಲ್ ಮಾದರಿಯ 70 ಕೆಜಿ ದೇಹ ತೂಕ ವಿಭಾಗದಲ್ಲಿ ಚಿನ್ನದ ಪದಕ ಪಡೆದಿರುತ್ತಾರೆ.**

**2016 ಧಾರವಾಡದ ಗುಡಿಯಾಳದಲ್ಲಿ ನಡೆದ ಮುಕ್ತ ಕುಸ್ತಿ ಪಂದ್ಯಾವಳಿಯಲ್ಲಿ ಭಾಗವಹಿಸಿ ಕರ್ನಾಟಕ ಕೇಶೂರ ಪ್ರಶಸ್ತಿ ಪಡೆದಿರುತ್ತಾರೆ.**

**ಸದ್ಯ ನೌಕರಿಗೆ ಸೇರಿದ ಮೇಲೆ ಇಲಾಖೆಯ ಕುಸ್ತಿ ಹೊರತುಪಡಿಸಿ ಯಾವುದೇ ಕುಸ್ತಿ ಪಂದ್ಯಾವಳಿಗಳಲ್ಲಿ ಭಾಗವಹಿಸುತ್ತಿಲ್ಲ.**

# ಉಮರನ ಒಸಗೆ – ಹೂತೋಟದ ತಂಗಾಳಿ

(ಮುಂದುವರೆದ ಭಾಗ..)

ಅಸಹಜವೇನೂ ಅಲ್ಲ. ಸಾವಿರ ವರ್ಷಗಳ ಹಿಂದೆ ಬಿಗಿಯಾದ ಧಾರ್ಮಿಕ ಕಟ್ಟುಪಾಡುಗಳ ಮಧ್ಯೆ ಕವಿಯಾದವನು ಧಾರ್ಮಿಕ ಕಾವ್ಯವನ್ನಷ್ಟೇ ರಚಿಸಬೇಕು ಎಂಬುದರ ಮಧ್ಯೆ ಲೌಕಿಕ, ಅಲೌಕಿಕಗಳೆರಡನ್ನೂ ಸಮನಾಗಿ ಸರಿದೂಗಿಸಿಕೊಂಡು ಬದುಕಬಹುದು ಎಂಬ ವಿಚಾರಗಳನ್ನು ಹೇಳುವುದು ಅಸಾಧಾರಣ ಧೈರ್ಯದ ಮಾತು. ಕಾವ್ಯದಂತಹ ಕಲಾ ಮಾಧ್ಯಮವನ್ನು ಇದಕ್ಕೆ ಸಮರ್ಥವಾಗಿ ಉಪಯೋಗಿಸಿಕೊಂಡ ಹಿರಿಮೆ ಉಮರನದು.

ಉಮರನ ಕಾವ್ಯವನ್ನು ಇನ್ನೊಂದು ಬಗೆಯಲ್ಲೂ ನೋಡಿದ್ದಾರೆ. ಈತನ ಇಡೀ ರುಬಾಯತ್‌ಗಳೆಲ್ಲವೂ ಭಗವತ್ ಚಿಂತನೆಯಿಂದಲೇ ತುಂಬಿವೆ ಹಾಗೂ ಗೂಢಾರ್ಥಗಳಿಂದಲೇ ತುಂಬಿವೆ. ಅವುಗಳನ್ನು ಅಧ್ಯಾತ್ಮದ ದೃಷ್ಟಿಕೋನದಿಂದ ನೋಡಿದಾಗ ಅವುಗಳ ಸತ್ಯ ತಿಳಿಯುತ್ತದೆ ಎನ್ನುತ್ತಾರೆ. ಮದ್ಯ ಎಂದರೆ ಭಗವದುಪಾಸನೆಯ ಆನಂದ, ಬಟ್ಟಲೆಂದರೆ ಮನುಷ್ಯಹೃದಯ, ಅರವಟಿಗೆಯೆಂದರೆ ಸೂಫಿ ಯೋಗಿಗಳ ಗೋಷ್ಠಿ, ಪ್ರಿಯೆ ಎಂದರೆ ಬುದ್ಧಿ ಅಥವಾ ಮನಸ್ಸು, ಗಂಧರ್ವ ಎಂದರೆ ದೇವರನ್ನು ಸಾಕ್ಷಾತ್ಕಾರ ಮಾಡಿಕೊಂಡ ವನು. ಇದರ ಅನುಸಾರ ರುಬಾಯತ್‌ಗಳನ್ನು ರಚಿಸಿದ್ದಾನೆ ಎನ್ನುವುದು ವಿಮರ್ಶಕರ ಮತ. ಇದು ಸರಿ ಎನ್ನುವಂತೆ ಸಾಕಷ್ಟು ರುಬಾಯತ್‌ಗಳು ಸಾಕ್ಷಿ ಒದಗಿಸುತ್ತವೆ. ಈತನ ಧಾರ್ಮಿಕ ಮನಸ್ಸನ್ನು, ದೈವ ಭಕ್ತಿಯನ್ನೂ, ಧಾರ್ಮಿಕ ಜಿಜ್ಞಾಸೆಯನ್ನೂ, ನಮ್ಮ ಮುಂದಿಡುತ್ತವೆ.

**ಹಿಂದೊಂದು ಬಾಗಿಲ್, ಆ ಬೀಗಕ್ಕೆ ಕೈಯಿಲ್ಲ,**
**ಮುಂದೆ ತೆರೆ, ಅದನೆತ್ತಿ ನೋಡಲಳವಲ್ಲ,**
**ಈ ಎಡೆಯೊಳೊಂದೆರಡು ದಿನ ನೀನು ನಾನೆಂದು**
**ಹರಟುವೆವು: ಬಳಿಕಿಲ್ಲ ನೀನು ನಾನುಗಳು**

**ಪದ್ಯ – 33**

**ಸತ್ಯಕಮಸತ್ಯಕಂ ನಡುಗೋಡೆ ಕೂದಲೆಳೆ**
**ಒಂದಕ್ಷರದೊಳೆಲ್ಲೋ ಗುಟ್ಟಿರುವುದಂತೆ**
**ಅದನು ಪಿಡಿದೊಡೆ ಸೃಷ್ಟಿಭಂಡಾರ ನಮಗೆ ವಶ:**
**ಸೃಷ್ಟೀಶನುಂ ಸಿಲುಕಬಹುದು ನಮಗದರಿಂ**

**ಪದ್ಯ – 48**

**ಈಶಕಲೆ ಪರಿಯುತಿದೆ ಸೃಷ್ಟಿಯಂಗಾಂಗದಲಿ**
**ನಮ್ಮ ಹಿಡಿಗೊದವದೆಯೆ ಪಾದರಸದಂತೆ**
**ಮೀನಿಂದಲ್ ಇಂದುವರಮ್ ಅಮಿತರೂಪಕ ನವನು**
**ರೂಪಂಗಳಳಿದಾವು, ನಿಚ್ಚಮಿರುವನವನ್**

**ಪದ್ಯ – 49**

**ಈ ಜಗಕೆ ನಾನೇಕೆ ಬಂದಿಹೆನೊ ! ತಿಳಿಯದದು**
**ಎಲ್ಲಿಂದ ಬಂದೆನೋ ! ಪೋಪುದಾವೆಡೆಗೋ !**
**ಇಚ್ಚೆ ಕೇಳುವರಿಲ್ಲ, ಗುಟ್ಟು ಬಿಚ್ಚುವರಿಲ್ಲ**
**ಮರುಭೂಮಿಯಲಿ ಭೊರಿಡುವ ಗಾಳಿ ನಾನು.**


**ಪದ್ಯ – 28**


**ದೇವ ನಾನ್ ಚಪಲದ ಗುಲಾಮ, ನಿನ್ನೊಳ್ವೆಲ್ಲಿ?**
**ನನ್ನ ಮನ ಮಬ್ಬುಗವಿ, ನಿನ್ನ ಬೆಳಕೆಲ್ಲಿ?**
**ನೇಮದಲಿ ನಾಂ ನಡೆಯೆ ನೀಂ ಸಗ್ಗವೀವುದೆನೆ**
**ವರ್ತಕನ ಮಾತಾಯ್ತು, ನಿನ್ನ ದಯೆಯೆಲ್ಲಿ?**

**ಪದ್ಯ – 113**

**ಭಕ್ತಯಿಂ ಜಪಸರವ ದೇವ, ನಾಂ ಕೋದಿಲ್ಲ,**
**ಪಾಪಗಳ ಧೂಳ ಮುಖದಿಂದ ತೊಳೆದಿಲ್ಲ,**
**ಆದೊಡಂ ನಿನ್ನ ಕರುಣೆಯೊಳಾಶೆ ಬಿಟ್ಟಿಲ್ಲ,**
**ಏತಕೆನೆ ನಾನೊಂದನೆರೆಡೆಂದುದಿಲ್ಲ.**

**ಪದ್ಯ – 133**





ಬಿ.ಎಂ.ರಾಜಶೇಖರ, ಶಿಕ್ಷಕರು
M:9900705323

Scan For Digital Colourful
HAMPI TIMES E-paper

ಉಮರನ ರುಬಾಯತ್‌ಗಳು ಒಂದು ನಿಶ್ಚಿತ ಸೂತ್ರಕ್ಕೆ ಅನುಗುಣವಾಗಿ ರಚಿಸಿದವುಗಳಲ್ಲ. ಬಹಳಷ್ಟು ಚೌಪದಿಗಳು ಸಾಂರ್ಭಿಕವಾಗಿ ರಚನೆಯಾಗಿವೆ. ವಿಭಿನ್ನ ಸಂಗತಿಗಳನ್ನು ತಿಳಿಸುತ್ತವೆ. ಅನೇಕ ವೇಳೆ ವೈರುಧ್ಯಗಳೂ ಕಾಣುತ್ತವೆ. ಉಮರನೂ ಕೂಡಾ ಸ್ವತಂತ್ರ ಮನೋಭಾವದ ವ್ಯಕ್ತಿಯಾಗಿದ್ದನು. ಹಾಗಾಗಿ ಇವುಗಳನ್ನು ಪ್ರತ್ಯೇಕವಾಗಿ ನೋಡುವುದು ಸರಿಯಾದ ಕ್ರಮ. ಈ ಎಲ್ಲವುಗಳ ಸಮಗ್ರ ಅಧ್ಯಯನದಿಂದ ನಾವು ಬದುಕಿನ ಕುರಿತಾಗಿ ಒಂದು ಆರೋಗ್ಯಕರ ದೃಷ್ಟಿಕೋನವನ್ನು ರೂಪಿಸಿಕೊಳ್ಳಬಹುದು.

ಈ ಕುರಿತಾಗಿ ಡಿ.ವಿ.ಜಿ ಯವರು ಉಮರನ ಅಭಿಪ್ರಾಯವನ್ನು ಗ್ರಹಿಸಿ ಅಂತಿಮವಾಗಿ ಹೀಗೆ ಹೇಳುತ್ತಾರೆ. " ಈ ಲೋಕದಲ್ಲಿ ಸತ್ಯ ಯಾವುದು, ಸರಿ ಯಾವುದು ತಿಳಿದಿಲ್ಲ, ಆಯಸ್ಸು ಮಿತವಾಗಿದೆ, ಚಿಂತೆ ಅಪಾರವಾಗಿದೆ, ಇಂದಿನ ಈ ಜೀವಂತ ದೇಹ ನಾಳೆ ಮಣ್ಣಾಗುತ್ತದೆ. ಸೊಬಗಿನ ದೇಹ ಧೂಳಾಗುತ್ತದೆ. ಆ ಮಣ್ಣಿನಿಂದ ಹೊಸ ಹೂವು ಚಿಗುರು ಮೂಡಿ ಬರುತ್ತವೆ. ಯಾವುದೂ ಶಾಶ್ವತವಲ್ಲ. ಮೃತ್ಯು ಒಂದೇ ಸತ್ಯ ಹೀಗಿರುವಾಗ ಅತಿಯಾದ ದು:ಖ, ಚಿಂತೆಯಿಂದ ಆಗುವುದೇನೂ ಇಲ್ಲ. ದೊರೆತಷ್ಟು ಸುಖವನ್ನು ಅನುಭವಿಸಿ ಉಲ್ಲಾಸದಿಂದಿರೋಣ. ತಾಪತ್ರಯ, ಗೋಳಾಟ ಎಂದೆಂದಿಗೂ ಇದ್ದೇ ಇರುತ್ತದೆ. ಒಪ್ಪತ್ತಾದರೂ ಉಲ್ಲಾಸದಿಂದ ಇರೋಣ. ನಮ್ಮಿಂದ ತಿದ್ದಲಾರದ, ಸರಿಪಡಿಸಲಾಗದ ಸಾವಿರಾರು ಸಮಸ್ಯೆಗಳಿವೆ. ಇವೆಲ್ಲ ಚಿಂತೆ, ದು:ಖಗಳನ್ನು ನೆನೆದು ಕೊರಗುತ್ತಾ ಆಯುಷ್ಯವನ್ನು ಕಳೆದುಕೊಳ್ಳಬಾರದು. ಸಾಧ್ಯವಾದಷ್ಟು ಸಮಾಧಾನವನ್ನು ತಂದುಕೊಂಡು ಇರುವುದನ್ನೇ ಈಶ್ವರ ಪ್ರಸಾದ ಎಂದುಕೊಂಡು ಸಂತೋಷಪಡೋಣ. ಎಲ್ಲರಿಗೂ ಸುಲಭವಾಗಿ ದೊರೆಯುವ ಕೆಲವು ಸದ್ಗ್ರಂಥಗಳು, ಸರಸಿಗಳಾದ ಗೆಳೆಯರು, ಒಂದೆರೆಡು ಗುಟುಕು ದ್ರಾಕ್ಷಾರಸ, ಅನುರಾಗಿಣಿ, ಗುಲಾಬಿಯ ಸೌರಭ, ಚಂದ್ರನ ಶೀತಲ ಕಾಂತಿ, ಪ್ರಕೃತಿಯ ಮಡಿಲಿನಲ್ಲಿ ಜೀವಿಸುವುದು, ಭಗವತ್ ಚಿಂತನೆಯಲ್ಲಿ ತೊಡಗುವುದು ಇಷ್ಟರಿಂದ ಇರುವ ಬದುಕನ್ನು ಸಾರ್ಥಕಪಡಿಸಿಕೊಳ್ಳಬಹುದು. ಹಾಗೂ ಇದು ಸರಿಯಾದ ದಾರಿ." ಬಹುಶ: ಇದು ಎಲ್ಲರಿಗೂ ಒಪ್ಪಿತವಾದದ್ದು ಎನ್ನಬಹುದು.

**ಜೀವನದ ಸೊದೆಯ ಸನಿಯಲ್ಕಿರುವುದೀ ನಿಮಿಷ**
**ಕರೆವುದಿನ್ನೊಂದು ನಿಮಿಷದಲಿ ಸುಡುಗಾಡು**
**ರವಿಶಶಿಗಳೋಡುತಿಹರೆಲ್ಲಿ ಶೂನ್ಯೋದಯಕೆ**
**ಸಾಗುತಿಹರಕಟ ! ಬಾ ಸೊದೆಯುಣುವ ಬೇಗ.**

**ಪದ್ಯ–39**

ಉಮರನ ರುಬಾಯತ್‌ಗಳನ್ನು ಡಿ.ವಿ.ಜಿಯವರಿಗಿಂತ ಉತ್ತಮ ವಾಗಿ ಕನ್ನಡದಲ್ಲಿ ಪುನರ್ ಸೃಷ್ಟಿಸಲು ಸಾಧ್ಯವೇ ಇಲ್ಲ. ಇವು ಅನುವಾದಗಳು ಎಂದು ಭಾಸವಾಗುವುದೇ ಇಲ್ಲ. ಪರ್ಶಿಯಾದ ಕವಿತೆಗಳನ್ನು ಕನ್ನಡದ ಸೊಗಡಿಗೆ ಒಗ್ಗಿಸಿ ಈ ಮಣ್ಣಲ್ಲೇ ಅರಳಿದ ಹೂವುಗಳಂತೆ ಮಾರ್ಪಡಿಸಿದ್ದಾರೆ. ಇದು ಕನ್ನಡದ ಅನುವಾದ ಕ್ಷೇತ್ರಕ್ಕೊಂದು ಆಚಾರ್ಯ ಕೃತಿಯಾಗಿದೆ. ಡಿ.ವಿ.ಜಿ ಯವರಂತಹ ಋಷಿ ಸದೃಶ ಕವಿಯನ್ನು ಪಡೆದ ಕನ್ನಡಿಗರೂ, ಕನ್ನಡ ನಾಡೂ ಧನ್ಯ. ಇದು ಈ ನೆಲದ ಪುಣ್ಯ. ಉಮರನ ಒಸಗೆ ಡಿ.ವಿ.ಜಿ ಯವರ ಶ್ರೇಷ್ಠ ಕೃತಿಗಳಲ್ಲಿ ಒಂದು. ಅನುವಾದಕರನ್ನು ಕೊಲೆಗಾರರು ಎನ್ನುವ ಮಾತೊಂದಿದೆ. ಆದರೆ ಡಿ.ವಿ.ಜಿಯವರು ಇದರ ಮೂಲಕ ತಾವೆಂತಹ ಅಸಾಮಾನ್ಯ ಕಲೆಗಾರರು ಎಂಬುದನ್ನು ತೋರಿಸಿದ್ದಾರೆ. ಅನುವಾದದ ಮೂಲ ಪಾಠಗಳನ್ನು ಈ ಕೃತಿಯಿಂದ ನಮಗೆ ಕಲಿಸಿದ್ದಾರೆ. ಮೂಲ ಕವಿಯ ಮನಸ್ಸು, ಭಾವ, ಹೃದಯಗಳನ್ನು ಅರ್ಥ ಮಾಡಿಕೊಂಡು ತನ್ನೊಳಗೆ ಅನುಭವಿಸಿ ಅದನ್ನು ಅತ್ಯುನ್ನತ ಕುಸುರಿ ಕೆಲಸದೊಂದಿಗೆ ಕಲಾಸೃಷ್ಟಿ ಮಾಡುವ ಮಾಟವನ್ನು ಇಲ್ಲಿ ನೋಡಬಹುದು. ಕನ್ನಡಿಗರೆಲ್ಲರೂ ಈ ಕಾವ್ಯ ರಸಾಯನವನ್ನು ಸವಿಯಬೇಕು. ಈ ಕೃತಿಯು ಕನ್ನಡಿಗರಿಗೆ, ಕನ್ನಡ ಭಾಷೆಗೆ ಡಿ.ವಿ.ಜಿಯವರು ನೀಡಿದ ಅನುಪಮ ಕೊಡುಗೆಯಾಗಿದೆ. ಹಾಗಾಗಿ ಉಮರ್ ಖಯ್ಯಾಮ್, ಫಿಟ್ಸ್ ಜೆರಲ್ಡ್, ಡಿ.ವಿ.ಜಿ, ಎಲ್ಲರೂ ವಂದ್ಯರು.

Printed by: MANJUNATHA .H .B Published by: A. SHUBHA. Owned by: A. SHUBHA and Printed at : AMRITH PRINTERS, No. 63/A, Opp. Police Station, Ramanagara, Hagaribommanahalli – 583212, Vijayanagara Dist., Karnataka. Published at : At Ward No.15, Near Bannimahankali Temple, 3rd Cross, New Amaravathi, Hospet - 583201, Vijayanagara Dist., Karnataka. Editor : BASAPUR BASAVARAJA, PRGI No:KARKAN/2023/88055

## ಕವಿ ಮನಸು

### ಶಿಕ್ಷಿಸಲಿ ಬೇಗ

ಕಹಿ ಘಟನೆಗಳ ನೋಡಿ
ನಲುಗುತೀ ಮನವು
ಭರವಸೆಗೆ ಎರವಾದ ದ್ರೋಹಿಗಳ ಕುಲವು
ಸೈನಿಕರು ಗಡಿಯಲ್ಲಿ ಕಾಯುತಿರೆ ನಿತ್ಯಾ
ಒಳಗಿರುವ ವೈರಿಗಳು ಕಾಡುತಿವೆ ಸತ್ಯಾ॥ಪ॥

ಜೊತೆಗಿರಲು ನಗುವಿಂದ ಭರವಸೆಯು
ಮೂಡಿ
ಒಲವಲೀ ಅವರೊಡನೆ ಜೊತೆ ಸೇರಿ ಆಡಿ
ಬಲವು ಗೆಲುವು ಒಗ್ಗಟ್ಟಿನಿಂದಾ
ದ್ರೋಹ ಮೋಸ ದೊರೆಯಿತವರಿಂದ
ವೈರಿಯಾ ಪಡೆಗವರು ಮಾಹಿತಿಯ ನೀಡೀ
ಮಾಡಿದರು ದ್ರೋಹ॥

ಇರಿತವಿದು ಚೂರಿಯಲಿ ಹಿಂಭಾಗದಿಂದ
ಒಳಗಿನಾ ಹುಳುಗಳಿವು ಕೊರಯೆ
ಒಳಗಿಂದಾ
ದೇಶ ಪ್ರೇಮ ಇವರಲ್ಲಿ ದೂರಾ
ಸ್ವಾರ್ಥ,ದ್ರೋಹ ರಕ್ತದಲಿ ಮಿಶ್ರ
ಮೋಸದಾ ಮಂದಿಯನು ಶಿಕ್ಷಿಸಲಿ ಬೇಗಾ
ದೊರೆಯುವುದೆ ವೇಗ?॥

– ಪೆರ್ಮುಖ ಸುಬ್ರಹ್ಮಣ್ಯ ಭಟ್

## ಮೈಕ್ರೋ ನ್ಯೂಸ್

### ಟಣಕನಕಲ್: ಶಿಶಿಕ್ಷು ತರಬೇತಿಗೆ ಮೇ 22 ರಂದು ಕ್ಯಾಂಪಸ್ ಸಂದರ್ಶನ

**ಹಂಪಿ ಟೈಮ್ಸ್ ಕೊಪ್ಪಳ**

ಟಣಕನಕಲ್ ಸರ್ಕಾರಿ ಕೈಗಾರಿಕಾ ತರಬೇತಿ ಸಂಸ್ಥೆ ಹಾಗೂ ಹೋಂಡಾ ಮೋಟಾರ್ಸ್ ಮೋಟಾರ್ ಪ್ರವೇಟ್ ಲಿಮೀಟೆಡ್ ನರಸಾಪುರ ರವರ ವತಿಯಿಂದ ಶಿಶಿಕ್ಷು ತರಬೇತಿಗಾಗಿ ಕ್ಯಾಂಪಸ್ ಸಂದರ್ಶನವನ್ನು ಮೇ 22 ರಂದು ಬೆಳಿಗ್ಗೆ 9 ಗಂಟೆಗೆ ಟಣಕನಕಲ್ ಸರ್ಕಾರಿ ಕೈಗಾರಿಕಾ ತರಬೇತಿ ಸಂಸ್ಥೆಯಲ್ಲಿ ಏರ್ಪಡಿಸಲಾಗಿದೆ.

ಐಟಿಐ ಪಾಸಾದ ಹಾಗೂ ಪ್ರಸ್ತುತ ಐ.ಟಿ.ಐ ಎರಡನೇ ವರ್ಷದಲ್ಲಿ ತರಬೇತಿ ಪಡೆಯುತ್ತಿರುವ ಎಲೆಕ್ಟ್ರಿಷಿಯನ್, ಫೀಟ್ಟರ್, ಟರ್ನರ್, ಮೇಕಾನಿಕ್ ಮೋಟರ್ ವೇಹಿಕಲ್, ಮಷಿನಿಸ್ಟ್, ಎಲೆಕ್ಟ್ರಿಕ್ ಮೇಕಾನಿಕ್, ಮೇಕಾನಿಕ್ ಡೀಸೆಲ್, ಟೋಲ್ಸ್ & ಡೈ ಮೇಕಿಂಗ್ ಮತ್ತು ವೇಲ್ಡರ್, ಅಡ್ವಾನ್ಸ್ ಸಿ.ಎನ್.ಸಿ ಮಷನಿಂಗ್ ಟೇಕ್ನಿಷಿಯನ್, ಮೇಕಾನಿಕ್ ಎಲೆಕ್ಟ್ರಿಕ್ ವೇಹಿಕಲ್ ವೃತ್ತಿಯ ಅಭ್ಯರ್ಥಿಗಳಿಗೆ ಶಿಶಿಕ್ಷು ತರಬೇತಿ (ಅಪ್ರೇಂಟಿಶಿಪ್ ಟ್ರೈನಿಂಗ್) ಗಾಗಿ ಕ್ಯಾಂಪಸ್ ಸಂದರ್ಶನವನ್ನು ನಡೆಸಲಾಗುತ್ತಿದೆ.

ಹಂಪಿ ಟೈಮ್ಸ್
ವಿಜಯನಗರದ ಹೆಮ್ಮೆ
ಕನ್ನಡ ದಿನ ಪತ್ರಿಕೆ
ವಿಜಯನಗರ ಜಿಲ್ಲೆಯ ಸಮಗ್ರ ಸುದ್ದಿ, ವಿಜ್ಞಾನ, ವಿಶೇಷ ಲೇಖನಗಳನ್ನು ಓದಲಿಚ್ಛಿಸುವವರು ಈ ಕೆಳಗಿನ ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ, ವಾಟ್ಸಪ್ ಗ್ರೂಪಿಗೆ ಜಾಯಿನ್ ಆಗಿ ಹಂಪಿ ಟೈಮ್ಸ್ ಇ-ಪತ್ರಿಕೆ ಓದಿರಿ.
Only Admins can Send Messages to this Group
Join with Us

# ಯುವಜನರ ಭರವಸೆಯ ಕಿರಣ ಯುವನಿಧಿ

## ವಿಜಯನಗರ ಜಿಲ್ಲೆಯಲ್ಲಿ 7,373 ಫಲಾನುಭವಿಗಳಿಗೆ ರೂ.10 ಕೋಟಿ ನೆರವು

**ಹಂಪಿ ಟೈಮ್ಸ್ ಹೊಸಪೇಟೆ**

ನಿರುದ್ಯೋಗಿ ಯುವಕ, ಯುವತಿಯರಿಗೆ ರಾಜ್ಯ ಸರ್ಕಾರದ ಯುವನಿಧಿ ಯೋಜನೆ ಭರವಸೆಯ ಆಶಾಕಿರಣವಾಗಿದೆ. ಓದು ಪೂರ್ಣಗೊಳಿಸಿ ಆರು ತಿಂಗಳಾದರೂ ಉದ್ಯೋಗ ದೊರಕದ ವರಿಗೆ ಯುವನಿಧಿ ಯೋಜನೆಯಡಿ ನಿರುದ್ಯೋಗ ಭತ್ಯೆ ನೀಡಲಾಗುವುದು. ಈ ಭತ್ಯೆಯನ್ನು ಎರಡು ವರ್ಷಗಳ ಕಾಲ ಪಡೆಯಬಹುದಾಗಿದೆ.

ಸರ್ಕಾರ ಯೋಜನೆಯಡಿ ಪದವಿ ಉತ್ತೀರ್ಣ ರಾದವರಿಗೆ ರೂ.3000, ಡಿಪ್ಲೋಮಾ ಉತ್ತೀರ್ಣ ರಾದವರಿಗೆ ರೂ.1500 ಗಳನ್ನು ಪ್ರತಿ ಮಾಹೆ ನೇರವಾಗಿ ಫಲಾನುಭವಿಗಳ ಖಾತೆಗೆ ಜಮೆ ಮಾಡುತ್ತಿದೆ. ಯುವನಿಧಿ ಯೋಜನೆಗೆ ರಾಜ್ಯ ಸರ್ಕಾರ 2024 ರ ಜನವರಿ.12 ರಂದು ಸ್ವಾಮಿ ವಿವೇಕಾನಂದರ ಜನ್ಮದಿನಾಚರಣೆ ವೇಳೆ ಶಿವಮೊಗ್ಗದಲ್ಲಿ ಚಾಲನೆ ನೀಡಿತು. ಸದ್ಯ 2023–24 ಹಾಗೂ 2024–25ನೇ ಸಾಲಿನಲ್ಲಿ ಓದು ಪೂರ್ಣಗೊಳಿಸಿ ನಿರುದ್ಯೋಗಿಗಳಾಗಿರುವ ಯುವ ಜನರು ನಿರುದ್ಯೋಗ ಭತ್ಯೆ ಪಡೆಯು ತ್ತಿದ್ದಾರೆ. ವಿಜಯನಗರ ಜಿಲ್ಲೆಯಲ್ಲಿ ಪದವಿ ಪೂರೈಸಿದ 7,217 ಹಾಗೂ ಡಿಪ್ಲೋಮಾ ಪೂರ್ಣಗೊಂಡ 156 ಫಲಾನುಭವಿಗಳು ಸೇರಿ ಒಟ್ಟು 7,373 ಫಲಾನುಭವಿಗಳು ಯೋಜನೆಯ ಲಾಭ ಪಡೆಯುತ್ತಿದ್ದಾರೆ. ಫೆಬ್ರವರಿ 2025 ರ ಅಂತ್ಯಕ್ಕೆ ರೂ.9,89,04,000 ಸರ್ಕಾರದಿಂದ ವೆಚ್ಚ ಮಾಡಲಾಗಿದೆ. ಈ ಮೊತ್ತ ಮೇ.2025 ರ ಅಂತ್ಯಕ್ಕೆ ರೂ.10 ಕೋಟಿ ದಾಟಲಿದೆ.

7,373 ಫಲಾನುಭವಿಗಳಲ್ಲಿ 3891 ಪುರುಷ ಹಾಗೂ 3482 ಮಹಿಳೆಯರು ಇದ್ದಾರೆ. ಈ ಪೈಕಿ 1824 ಪರಿಶಿಷ್ಟ ಜಾತಿ, 1074 ಪರಿಶಿಷ್ಟ




ಪಂಗಡ, 3924 ಹಿಂದುಳಿದ ವರ್ಗ ಹಾಗೂ 551 ಸಾಮಾನ್ಯ ವರ್ಗದ ಫಲಾನುಭವಿಗಳು ಇದ್ದಾರೆ. ಜಿಲ್ಲೆಯ ತಾಲೂಕುಗಳ ಪೈಕಿ ಹೂವಿನ ಹಡಗಲಿ 1151, ಹರಪನಹಳ್ಳಿ 1763, ಹಗರಿಬೊಮ್ಮನಹಳ್ಳಿ 1028, ಹೊಸಪೇಟೆ 1727, ಕೂಡ್ಲಿಗಿ 949 ಹಾಗೂ ಕೊಟ್ಟೂರು 755 ಫಲಾನುಭವಿಗಳು ಯೋಜನೆಯ ಲಾಭ ಪಡೆಯುತ್ತಿದ್ದಾರೆ.

ಉದ್ಯೋಗಕ್ಕೆ ಅರ್ಜಿ ಹಾಕಲು, ಸಂದರ್ಶನಕ್ಕೆ ಹಾಜರಾಗಲು, ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ತರಬೇತಿ ಪಡೆಯಲು, ಪುಸ್ತಕಗಳ ಖರೀದಿ, ಕೌಶಲ್ಯ ತರಬೇತಿ ಗಳಿಸಲು ಯುವನಿಧಿ ಭತ್ಯೆ ಯುವ ಜನರಿಗೆ ಆಸರೆಯಾಗಿದೆ. ಇದರೊಂದಿಗೆ ಪೊಷಕರ ಮೇಲಿನ ಭಾರ ಕಡಿಮೆಯಾಗಿದೆ.

ಹೂವಿನಹಡಗಲಿ ನಿವಾಸಿಯಾದ ದ್ಯಾಮಪ್ಪ, ಯೋಜನೆಯಿಂದ ವೈಯಕ್ತಿಕ ಜೀವನಕ್ಕೆ ತುಂಬಾ ಅನುಕೂಲವಾಗಿದ್ದು, ಮುಂಬರುವ ಪರೀಕ್ಷೆಗಳನ್ನು ಎದುರಿಸಲು ಸ್ಪರ್ಧಾತ್ಮಕ ಪುಸ್ತಕ ಗಳನ್ನು ಖರೀದಿಸಲು ಯುವನಿಧಿ ಸಹಾಯಧನ ತುಂಬಾ ಸಹಕಾರಿಯಾಗಿದೆ ಎಂದು ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ.

ಹರಪನಹಳ್ಳಿ ತಾಲ್ಲೂಕಿನ ಕಣಿವಿಹಳ್ಳಿ ಗ್ರಾಮದ ಸುಪ್ರೀಯಾ ಬಿ.ಎಡ್. ಪದವೀಧರೆ ಯಾಗಿದ್ದು, ಸರ್ಕಾರಿ ಶಿಕ್ಷಕಿಯಾಗುವ ಕನಸು ಹೊಂದಿದ್ದಾರೆ. ಶಿಕ್ಷಕರ ನೇಮಕಾತಿಯ ಸ್ಪರ್ಧಾತ್ಮಕ ಪರೀಕ್ಷೆ ಗಳನ್ನು ಎದುರಿಸಲು ನನಗೆ ಅನೇಕ ಪುಸ್ತಕಗಳ ಅಗತ್ಯವಿದೆ. ಹಾಗಾಗೀ ಪುಸ್ತಕಗಳ ಖರೀದಿಗೆ ಯುವನಿಧಿ ಹಣ ತುಂಬಾ ಅನುಕೂಲವಾಗಿದೆ ಎಂದು ತಿಳಿಸಿದ್ದಾರೆ.

ಹರಪನಹಳ್ಳಿ ಎಲ್.ಸುಪ್ರೀತ, ಇಂಜಿನಿಯರಿಂಗ್ ಪದವಿ ಪಡೆದಿದ್ದು, ಇವರಿಗೆ ಮುಂದಿನ ಉದ್ಯೋಗಕ್ಕೆ ಅಗತ್ಯವಾದ ಕೌಶಲ್ಯ ಪಡೆಯಲು ಹಾಗೂ ಸ್ಪರ್ಧಾತ್ಮಕ ಪರೀಕ್ಷೆಗಳ ತರಬೇತಿಗೆ ಯುವನಿಧಿ ಯೋಜನೆಯಡಿ ನೀಡಿರುವ ನಿರುದ್ಯೋಗ ಭತ್ಯೆ ಸಹಾಯವಾಗಿದೆ.

ಹಗರಿಬೊಮ್ಮನಹಳ್ಳಿಯ ಕೆ.ಪರುಶುರಾಮ್ ಬ್ಯಾಂಕಿಂಗ್ ಪರೀಕ್ಷೆಗಳನ್ನು ಎದುರಿಸಲು ಕೋಚಿಂಗ್ ಪಡೆಯುತ್ತಿದ್ದು, ಯುವನಿಧಿ ಹಣದಿಂದ ಕೋಚಿಂಗ್ ಸೆಂಟರ್ ಶುಲ್ಕ ಪಾವತಿಸುತ್ತಿದ್ದಾನೆ. ಕೊಟ್ಟೂರಿನ ಹೆಚ್.ಶಿವಣ್ಣ ಪದವಿ ಮುಗಿಸಿ ಉದ್ಯೋಗವಿಲ್ಲದ ಕಾರಣ ಆರ್ಥಿಕವಾಗಿ ಸಮಸ್ಯೆಯಲ್ಲಿ ಇದ್ದರು, ಪ್ರತಿಯೊಂದಕ್ಕೂ ಮನೆಯಲ್ಲಿ ಹಣ ಕೇಳುವ ಪರಿಸ್ಥಿತಿ ಎದುರಿಸುತ್ತಿದ್ದರು. ಸದ್ಯ ಯುವನಿಧಿ ಹಣ ಶಿವಣ್ಣನಿಗೆ ಅನುಕೂಲವಾಗಿದೆ. ಹಗರಿಬೊಮ್ಮನಹಳ್ಳಿ ಎಂ.ವಿದ್ಯಾ ಕಾಲೇಜು ಶಿಕ್ಷಣ ಪೂರೈಸಿ ವಿವಾಹವಾಗಿದ್ದಾರೆ. ಯುವನಿಧಿ ಹಣ ವೈಯಕ್ತಿಕವಾಗಿ ಸಹಾಯವಾಗುವುದರ ಜೊತೆಗೆ ಎಂ.ವಿದ್ಯಾ ಅವರ ಮಕ್ಕಳ ಶಾಲಾ ಶುಲ್ಕ ಭರಿಸಲು, ಪುಸ್ತಕ ಹಾಗೂ ಸಮವಸ್ತ್ರ ಖರಿದಿಸಲು ಸಹಾಯವಾಗಿದೆ. ಈ ಫಲಾನುಭವಿಗಳೆಲ್ಲರೂ ಯುವನಿಧಿ ಯೋಜನೆ ಜಾರಿಗೊಳಿಸಿದ ಸರ್ಕಾರಕ್ಕೆ ಹೃತ್ಪೂರ್ವಕವಾಗಿ ಅಭಿನಂಧನೆಗಳನ್ನು ಸಲ್ಲಿಸಿದ್ದಾರೆ.

# ಸರ್ಕಾರ ಕುರಿಗಳಿಗೆ ಉಚಿತ ಔಷಧಿ, ಕುರಿಗಾಯಿಗಳಿಗೆ ವಿಮೆ ಸೌಲಭ್ಯ ಕಲ್ಪಿಸಲಿ: ಉಜ್ಜಿನಿ ರುದ್ರಪ್ಪ

**ಹಂಪಿ ಟೈಮ್ಸ್ ಕೊಟ್ಟೂರು**

ಸಿಎಂ ಸಿದ್ದರಾಮಯ್ಯನವರು ಕುರಿ ಮತ್ತು ಉಣ್ಣೆ ಅಭಿವೃದ್ಧಿ ಸಹಕಾರ ಸಂಘಗಳ ಮೂಲಕ ಕುರಿಗಾರರಿಗೆ ಔಷಧಿ ವಿತರಿಸುವ ಯೋಜನೆಯನ್ನು



ಪುನರಾರಂಭಿಸಬೇಕೆಂದು ಕೊಟ್ಟೂರು ಹೋಬಳಿ ಕುರಿ ಮತ್ತು ಉಣ್ಣೆ ಅಭಿವೃದ್ಧಿ ಸಹಕಾರ ಸಂಘದ ಅಧ್ಯಕ್ಷ ಉಜ್ಜಿನಿ ರುದ್ರಪ್ಪ ಒತ್ತಾಯಿಸಿದ್ದಾರೆ.

ಸಿದ್ದರಾಮಯ್ಯನವರು ಮೊದಲ ಅವಧಿಯಲ್ಲಿ ಮುಖ್ಯಮಂತ್ರಿ ಯಾಗಿದ್ದ ಸಂದರ್ಭದಲ್ಲಿ ಈ ಯೋಜನೆಯನ್ನು ಜಾರಿಗೆ ತಂದಿದ್ದರು. ಕುರಿಗಾರರು ಖಾಸಗಿ ಔಷಧಿ ಅಂಗಡಿಗೆ ಹೋಗದೆ. ಸಹಕಾರ ಸಂಘದಲ್ಲಿ ಉಚಿತವಾಗಿ ಸಿಗುವ ಕುರಿ ಔಷಧಿ ಪಡೆಯುತ್ತಿದ್ದರು. ಇದರಿಂದ ಕುರಿಗಾರರಿಗೆ ಅನುಕೂಲವಾಗಿತ್ತು. ನಂತರ ರಾಜ್ಯದಲ್ಲಿ ಅಧಿಕಾರಕ್ಕೆ ಬಂದ ಬಿಜೆಪಿ ಪಕ್ಷ, ಈ ಯೋಜನೆಯನ್ನು ರದ್ದುಗೊಳಿಸಿದ್ದರಿಂದ ಕುರಿಗಾರರಿಗೆ ತುಂಬ ಅನಾನುಕೂಲವಾಗಿದೆ. ಪಶು ಆಸ್ಪತ್ರೆಯಲ್ಲಿ ಔಷಧಿ ಸಿಗುತ್ತಿಲ್ಲ. ಖಾಸಗಿ ಔಷಧಿ ಅಂಗಡಿಯಲ್ಲಿ ಸಾವಿರಾರು ರೂ. ಕೊಟ್ಟು ಔಷಧಿ ಖರೀದಿಸಿ ಕುರಿಗಳನ್ನು ಬದುಕಿಸಿಕೊಳ್ಳುವ ಅನಿವಾರ್ಯತೆ ಮತ್ತು ಕಷ್ಟ ಕುರಿಗಾಹಿಗಳಿಗೆ ಎದುರಾಗಿದೆ ಎಂದು ಅಸಮಧಾನ ವ್ಯಕ್ತಪಡಿಸಿದರು.

ಈ ಹಿಂದೆ ಕೊಟ್ಟೂರು ಹೋಬಳಿ ಕುರಿಗಾರರ ನಿಯೋಗ ಮುಖ್ಯಮಂತ್ರಿ ಸಿದ್ದರಾಮಯ್ಯರನ್ನು ಭೇಟಿಯಾಗಿ ಸಹಕಾರ ಸಂಘಗಳಿಗೆ ಔಷಧಿ ಸರಬರಾಜು ಮಾಡುವ ಯೋಜನೆಯನ್ನು ಪುನರಾರಂಭಿಸಬೇಕೆಂದು ಮನವಿ ಮಾಡಲಾಗಿದೆ. ವಿಜಯನಗರ ಜಿಲ್ಲೆಯಲ್ಲಿ ಅತಿ ಹೆಚ್ಚು ಕುರಿ ಸಾಕಾಣಿಕೆದಾರರು ಕೊಟ್ಟೂರು ತಾಲೂಕಿನಲ್ಲಿದ್ದಾರೆ. ಕುರಿ ಸಾಕಾಣಿಕೆಯಿಂದಲೇ ಬದುಕುನ್ನು ಕಟ್ಟಿಕೊಂಡಿದ್ದಾರೆ. ರಾಜ್ಯದ ಎಲ್ಲಾ ಕುರಿಗಾರರಿಗೂ ಹಾಗೂ ಕುರಿಗಳಿಗೂ ಜೀವವಿಮೆ ಮಾಡಿಸುವ ಯೋಜನೆಯನ್ನು ಜಾರಿಗೊಳಿಸಿದರೆ, ಕುರಿಗಾರರ ಅಭಿವೃದ್ಧಿ ಮತ್ತು ರಕ್ಷಣೆ ಮಾಡಿದಂತ್ತಾಗುತ್ತದೆ ಎಂದರು.

ರಾಜ್ಯದಲ್ಲಿ ಪಶು ಆಸ್ಪತ್ರೆಗಳ ಪುನಶ್ಚೇತನ ಮತ್ತು ಖಾಲಿ ಇರುವ ಪಶು ವೈದ್ಯರ ಹುದ್ದೆಗಳನ್ನು ಕೂಡಲೇ ತುಂಬಬೇಕು. ಎಷ್ಟೋ ಪಶು ಆಸ್ಪತ್ರೆಗಳಲ್ಲಿ ವೈದ್ಯರೇ ಇಲ್ಲ. ಕುರಿಗಳಿಗೆ ರೋಗ ಮತ್ತು ಅನಾರೋಗ್ಯ ಬಂದಾಗ ಕುರಿಗಾರರ ಪರದಾಟ ಹೇಳತೀರದಾಗಿದೆ ಎಂದರು. ಈ ಸಂದರ್ಭದಲ್ಲಿ ಕುರಿ ಸಹಕಾರ ಸಂಘದ ಉಪಾಧ್ಯಕ್ಷ ತೋಟದ ರಾಮಣ್ಣ ಮುಂತಾದವರಿದ್ದರು.

# ಭೂ ಗ್ಯಾರಂಟಿ : ಕಂದಾಯ ಸೇವೆಗಳ ಸುಧಾರಣೆ ಮುನ್ನುಡಿ

## ಡಿಸಿಎಂ ಡಿ.ಕೆ.ಶಿವಕುಮಾರ್ ಹೇಳಿಕೆ | ಅರ್ಹರಿಗೆ ಕಂದಾಯ ಗ್ರಾಮ ಹಕ್ಕುಪತ್ರ ವಿತರಣೆ

**ಹಂಪಿ ಟೈಮ್ಸ್ ಹೊಸಪೇಟೆ**

ರಾಜ್ಯ ಸರ್ಕಾರ ಪಂಚ ಗ್ಯಾರಂಟಿಗಳ ಜತೆಗೆ ಕಂದಾಯ ಇಲಾಖೆ ಸೇವೆಗಳಲ್ಲಿ ಸುಧಾರಣೆ ತರುವ ಭೂ ಗ್ಯಾರಂಟಿಗೂ ಚಾಲನೆ ನೀಡಿದೆ. ನೂರಾರು ವರ್ಷಗಳ ಕಾಲ ವಾಸವಿದ್ದರೂ ಕಂದಾಯ ಗ್ರಾಮವಲ್ಲದ ಕಾರಣ ಅರ್ಹರಿಗೆ ಯಾವುದೇ ಭೂ ಆಧಾರವಿರಲಿಲ್ಲ. ಇದನ್ನು ಸರಿಪಡಿಸಿ ಅರ್ಹರಿಗೆ ಕಂದಾಯ ಗ್ರಾಮ ಹಕ್ಕು ಪತ್ರಗಳನ್ನು ವಿತರಣೆ ಮಾಡಲಾಗುತ್ತಿದೆ ಎಂದು ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಹೇಳಿದರು.

ನಗರದ ಜಿಲ್ಲಾ ಕ್ರೀಡಾಂಗಣದಲ್ಲಿ ಸುದ್ದಿಗಾರರೊಂದಿಗೆ ಸೋಮವಾರ ಅವರು ಮಾತನಾಡಿದರು, ಸಮರ್ಪಣೆ ಸಂಕಲ್ಪ ಕಾರ್ಯಕ್ರಮದಲ್ಲಿ ವಿಜಯನಗರ ಜಿಲ್ಲೆಯ ಒಂದು ಲಕ್ಷಕ್ಕೂ ಅಧಿಕ ಕುಟುಂಬಗಳಿಗೆ ಕಂದಾಯ ಗ್ರಾಮ ಹಕ್ಕು ಪತ್ರ ಸಮರ್ಪಣೆ ಮಾಡಲಾಗುವುದು. ಈ ಮೂಲಕ ಕಂದಾಯ ಇಲಾಖೆ ಹೊಸ ಅಧ್ಯಾಯವನ್ನು ಬರೆದು ಇತಿಹಾಸ ಪುಟಕ್ಕೆ ಸೇರಲಿದೆ. ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ, ಹಿಂದುಳಿದ ವರ್ಗಗಳಿಗೆ ಸೇರಿದ ಕುಟುಂಬಗಳು ನೂರಾರು ವರ್ಷಗಳ ಕಾಲ ನೆಲೆ ನಿಂತು ವಾಸವಿದ್ದ ಸ್ಥಳವನ್ನು ಕಂದಾಯ ಗ್ರಾಮವಾಗಿ ಘೋಷಿಸಿರಲಿಲ್ಲ. ಈ ಹಿನ್ನಲೆಯಲ್ಲಿ ಅವರು ವಾಸವಿದ್ದ ಜಾಗದ ಹಕ್ಕು ಅವರಿಗೆ ಲಭಿಸಿರಲಿಲ್ಲ. ಭೂ ಆಧಾರ ಹಾಗೂ ಸ್ವತ್ತಿನ ಮಾಲಿಕತ್ವ ಇಲ್ಲದೆ ಪರದಾಡುವಂತಾಗಿತ್ತು. ಈ ಎಲ್ಲ ಸಂಕಷ್ಟಗಳಿಗೆ ಸರ್ಕಾರ ಇತಿಶ್ರೀ ಹಾಡಿದೆ. ಕಂದಾಯ ವ್ಯಾಪ್ತಿಯಲ್ಲಿ ಸರ್ಕಾರ ಅಥವಾ ಖಾಸಗಿ ಜಾಗದಲ್ಲಿ 16



ವರ್ಷಗಳಿಗಿಂತಲೂ ಹೆಚ್ಚು ಕಾಲ ವಾಸವಿದ್ದರೆ, ಅಂತಹ ಸ್ಥಳಗಳಿಗೆ ಸ್ವತಃ ತಹಶೀಲ್ದಾರ್ ಭೇಟಿ ನೀಡಿ ಜಾಗವನ್ನು ಸಬ್ ರಿಜಿಸ್ಟಾರ್‌ನಲ್ಲಿ ಉಚಿತವಾಗಿ ದಾಖಲಿಸಿ ವಾಸವಾಗಿರುವರಿಗೆ ಹಕ್ಕು ಪತ್ರ ನೀಡುತ್ತಾರೆ. ಇದಾದ ನಂತರ ಈ ಜಾಗದ ಮೇಲೆ ರಾಷ್ಟೀಕೃತ ಬ್ಯಾಂಕುಗಳಲ್ಲಿ ಸಾಲ ಸೌಲಭ್ಯ ಪಡೆಯಬಹುದು. ಆದರೆ ಮುಂದಿನ 15 ವರ್ಷದವರೆಗೆ ಈ ಜಾಗವನ್ನು ಮಾರಾಟ ಮಾಡಲು ಬರುವುದಿಲ್ಲ ಎಂದು ತಿಳಿಸಿದರು.

**ಜನರ ಭಾವನೆ ಮೇಲಲ್ಲ, ಬದುಕು ಹಸನಾಗಿಸಲು ರಾಜಕಾರಣ :**

ಜನರು ನಮಗೆ ನೀಡಿದ ಅಧಿಕಾರವನ್ನು ಸದುಪಯೋಗ ಪಡಿಸಿಕೊಂಡು ಒಳ್ಳೆಯ ಕೆಲಸವನ್ನು ಮಾಡುತ್ತಿದ್ದೇವೆ. ಪಂಚ ಗ್ಯಾರಂಟಿಗಳನ್ನು ಜಾರಿ ಮಾಡಿದ್ದೇವೆ. ಜನರ ಭಾವನೆ ಮೇಲೆ ರಾಜಕಾರಣ ಮಾಡುವ ಬದಲು, ಜನರ ಬದುಕು ಹಸನಾಗಿಸಲು ರಾಜಕಾರಣ ಮಾಡುತ್ತಿದ್ದೇವೆ. ಸರ್ಕಾರದ ಪ್ರತಿಯೊಂದು ಇಲಾಖೆಯಲ್ಲೂ ಸುಧಾರಣೆ ತರಲಾಗುತ್ತಿದೆ. ಅಭಿವೃದ್ಧಿ ಕೆಲಸವನ್ನು ಮಾಡುತ್ತಿದ್ದೇವೆ ಎಂದು ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಸ್ಪಷ್ಟಪಡಿಸಿದರು.

**ಇಂದಿರಾ ಗಾಂಧಿ ಪುತ್ಥಳಿ ನಿರ್ಮಾಣ :** ಹೊಸಪೇಟೆ ನಗರಕ್ಕೆ ಮಾಜಿ ಪ್ರಧಾನಿ ಇಂದಿರಾ ಗಾಂಧಿ ಭೇಟಿ ನೀಡಿ ಭಾಷಣ ಮಾಡಿದ ಇತಿಹಾಸವಿದೆ. ಈ ಹಿನ್ನಲೆಯಲ್ಲಿ ವಸತಿ, ಅಲ್ಪಸಂಖ್ಯಾತರ ಕಲ್ಯಾಣ, ವಕ್ಫ್ ಹಾಗೂ ಜಿಲ್ಲಾ ಉಸ್ತುವಾರಿ ಸಚಿವ ಬಿ.ಝಡ್.ಜಮೀರ್ ಅಹಮದ್ ಖಾನ್ ನೇತೃತ್ವದಲ್ಲಿ ಜಿಲ್ಲಾ ಕ್ರೀಡಾಂಗಣದ ಪಶ್ಚಿಮ ಭಾಗದಲ್ಲಿ ಇಂದಿರಾ ಗಾಂಧಿಯವರ ಪುತ್ಥಳಿ ನಿರ್ಮಾಣ ಮಾಡಲಾಗಿದೆ. ಮೇ.20 ರಂದು ಜಿಲ್ಲಾ ಕ್ರೀಡಾಂಗಣಲ್ಲಿ ಇಂದಿರಾಗಾಂಧಿ ಪುತ್ಥಳಿ ಲೋಕಾರ್ಪಣೆ ಮಾಡಿದ ಬಳಿಕ ಪ್ರಗತಿಯತ್ತ ಕರ್ನಾಟಕ ಸಮರ್ಪಣೆ ಸಂಕಲ್ಪ ವೇದಿಕೆ ಕಾರ್ಯಕ್ರಮ ನಡೆಯಲಿದೆ ಎಂದು ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ತಿಳಿಸಿದರು.

ಈ ವೇಳೆ ವಸತಿ, ವಕ್ಫ್ ಮತ್ತು ಅಲ್ಪಸಂಖ್ಯಾತರ ಕಲಾಣ ಇಲಾಖೆ ಹಾಗೂ ಜಿಲ್ಲಾ ಉಸ್ತುವಾರಿ ಸಚಿವ ಬಿ.ಜೆಡ್.ಜಮೀರ್ ಅಹ್ಮದ್ ಖಾನ್, ಕಂದಾಯ ಸಚಿವ ಕೃಷ್ಣ ಬೈರೇಗೌಡ ಹೊಸಪೇಟೆ ಶಾಸಕರಾದ ಹೆಚ್.ಆರ್.ಗವಿಯಪ್ಪ, ಕೂಡ್ಲಿಗಿ ಶಾಸಕ ಡಾ.ಎನ್.ಟಿ.ಶ್ರೀನಿವಾಸ್, ಜಿಲ್ಲಾಧಿಕಾರಿ ಎಂ.ಎಸ್.ದಿವಾಕರ್, ಜಿ.ಪಂ. ಸಿಇಓ ನೋಂಗ್ಜಾಯ್ ಮೋಹಮ್ಮದ್ ಅಲಿ ಅಕ್ರಮ್ ಷಾ, ಪೊಲೀಸ್ ವರಿಷ್ಠಾಧಿಕಾರಿ ಶ್ರೀಹರಿಬಾಬು. ಬಿ.ಎಲ್, ಬಳ್ಳಾರಿ ಪೊಲೀಸ್ ವರಿಷ್ಠಾಧಿಕಾರಿ ಡಾ.ವಿ.ಜೆ.ಶೋಭಾರಾಣಿ ಉಪಸ್ಥಿರಿದ್ದರು.

# ಸ್ವಾಭಿಮಾನದಿಂದ ಕೂಗಿ ಹೇಳು ಮಾದಿಗ ಎಂದು : ಮಾಜಿ ಸಚಿವ ಎಚ್ ಆಂಜನೇಯ



**ಹಂಪಿ ಟೈಮ್ಸ್ ಹೊಸಪೇಟೆ**

ನಗರದ ಡಾ. ಬಿಆರ್ ಅಂಬೇಡ್ಕರ್ ಭವನದಲ್ಲಿ ಒಳ ಮೀಸಲಾತಿಯ ಪರಿಶಿಷ್ಟ ಜಾತಿಗಳ ಸಮೀಕ್ಷೆಯಲ್ಲಿ ಮಾದಿಗ ಕ್ರಮ ಸಂಖ್ಯೆ 61 ಎಂದು ನಮೂದಿಸುವ ಹಾಗೂ ಮಾದಿಗ ಸಮಾಜದ ಜಾಗೃತಿ ಸಭೆ ನಡೆಯಿತು.

ಸಮಾಜ ಕಲ್ಯಾಣ ಇಲಾಖೆ ಮಾಜಿ ಸಚಿವ ಎಚ್ ಆಂಜನೇಯ ಮಾತನಾಡಿ, ಸರ್ವೆ ಕಾರ್ಯದಲ್ಲಿ ವಿದ್ಯಾವಂತ ಯುವಕರು ಸಕ್ರಿಯವಾಗಿ ಪಾಲ್ಗೊಳ್ಳಬೇಕು. ಸಮೀಕ್ಷೆಯಲ್ಲಿ ಮಾದಿಗ ಎಂದು ಸ್ವಾಭಿಮಾನದಿಂದ ಕೂಗಿ ಹೇಳಬೇಕು. ಸಮೀಕ್ಷೆದಾರರಿಗೆ ಕೇರಿಗೆ ಬಂದಾಗ ಸ್ವಾಗತ ಮಾಡಲಾಗಿದೆ. ಅದೇ ನಿಟ್ಟಿನಲ್ಲಿ ಹುಟ್ಟಿದ ಮಗುವಿನ ಹೆಸರು ಸಹ ಸಮೀಕ್ಷೆಯಲ್ಲಿ ಬರೆಸಬೇಕು. ಸರ್ವೆಯಿಂದ ಯಾರೂ ಸಹ ದೂರ ಉಳಿಯಬಾರದು. ಅಧಿಕಾರದ ಆಸೆಗಿಂತ ಸಮುದಾಯಕ್ಕೆ ನ್ಯಾಯ ದೊರಕಿಸುವ ಕೆಲಸವೇ ನನ್ನಾಸೆ. ಸಮಾಜದ ಒಳಿತಿಗಾಗಿ ದುಡಿಯೋಣ ಯಾವುದೇ ಸರ್ಕಾರದ ಹುದ್ದೆಗಳ ನೇಮಕಾತಿ ತುಂಬ ಬಾರದು ಎಂದು ಆದೇಶ ಮಾಡಿದ್ದಾಗಿರುತ್ತದೆ. 28 ರ ವರೆಗೆ ನಡೆಯಲಿರುವ ಸಮೀಕ್ಷೆಯಲ್ಲಿ ಭಾಗವಹಿಸಬೇಕು. ಬೇಡ ಜಂಗಮ ಬೇಡ ಜಂಗಮ ಎಂದರೆ ಬೇಡಿಕೊಂಡು ತಿನ್ನುವವರು ಭಿಕ್ಷಾಟನೆ ಮಾಡುವವರು ಬುಡ್ಗ ಜಂಗಮ ಇದ್ದಾರೆ. ಆದಿ ಕರ್ನಾಟಕ ಆದಿ ಆಂಧ್ರ ಆದಿ ದ್ರಾವಿಡ ಎಂದು ಬರೆಸಿದರೇ ಸಿಗಲ್ಲ ಹಾಗಾಗಿ ಮೂಲ ಜಾತಿ ಮಾದಿಗ ಎಂದು ನಮೂದಿಸಿ ಎಂದು ತಿಳಿಸಿದರು. ಈ ಸಂದರ್ಭದಲ್ಲಿ ಮಾದಿಗ ಸಮಾಜದ ಮುಖಂಡರಾದಎಂ.ಸಿ.ವೀರಸ್ವಾಮಿ,ಮಲ್ಲಿಕಾರ್ಜನ,ಶೇಷು,ಜಗನ್ನಾಥ,ಸಂತೋಷ, ಲಕ್ಷ್ಮೀ, ಶ್ರೀನಿವಾಸ.ಹೆಚ್, ಎಸ್.ಬಿ.ಮಂಜುನಾಥ, ಹನುಮಂತಪ್ಪ, ಮರಿದಾಸ, ಕರಿಯಪ್ಪ,ದುರುಗಪ್ಪ, ರವಿ, ಶರಣಪ್ಪ ರಾಮಾಂಜಿನಿ, ಶಣ್ಮುಕ, ಭರತ್ ಕುಮಾರ್ ಸಿ ಆರ್ ಸೇರಿದಂತೆ ಮತ್ತಿತರರು ಇದ್ದರು.

# ಒಂದು ಕಟ್ಟೆಯ ಇತಿಹಾಸ

**ಕೊಟ್ರೇಶ ಅಕ್ಕಿ, ಉಪನಾಯಕನಹಳ್ಳಿ**

ಆತ್ಮೀಯ ಗೆಳೆಯ ಮಂಜು ಜೊತೆ ಕಳೆದ ವರ್ಷದಿಂದ ಬೆಳಗಿನ ಜಾವ ಎದ್ದು ಹೊಸಪೇಟೆಯ ನಗರದ ಹೃದಯ ಭಾಗದಲ್ಲಿರುವ ಪುನೀತ ರಾಜಕುಮಾರ್ ಜಿಲ್ಲಾ ಕ್ರೀಡಾಂಗಣದಲ್ಲಿ ಹಲವು ಸುತ್ತುಗಳು ಹಾಕಿ ಬರುವುದನ್ನ ರೂಡಿ ಮಾಡಿಕೊಳ್ಳಲಾಗಿತ್ತು.

ಹೊಸಪೇಟೆಯ ಈ ಜಿಲ್ಲಾ ಕ್ರೀಡಾಂಗಣದಲ್ಲಿ ಇತ್ತಿಚಿಗೆ ಒಳಗಡೆ ಕಾರು ಬೈಕ್ ಗಳನ್ನು ತೆಗೆದುಕೊಂಡು ಹೋಗುವದನ್ನ ನಿಷೇದಿಸಿದ ಮೇಲೆ ನಾವುಗಳು ಸ್ಕೂಟಿಯನ್ನು ಮುನ್ಸಿಪಲ್ ಕಾಲೇಜ್ ಎದುರಗಡೆಯ ದ್ವಾರದ ಮೂಲಕ ಮೈದಾನ ಪ್ರವೇಶ ಮಾಡಿ ವಾಕಿಂಗ್ ಹೋಗುತ್ತಿದ್ದೇವು.

ನಾನು ಇರುವ ಪರಿಸರವನ್ನ ಸದಾ ಕುತೂಹಲದಿಂದ ನೋಡುವ ನನಗೆ ದಿನ ವಾಕಿಂಗ್ ಬರುವ ಜನರಿಂದ ಇಡಿದು ಉದಯಿಸುತ್ತಿರುವ ಸೂರ್ಯನನ್ನು ಮತ್ತೆ ಮತ್ತೆ ನೋಡುತ್ತಿದ್ದೆ. ಈ ಬಾರಿ ವಸಂತಕಾಲದಲ್ಲಿ ಮೈದಾನದೊಳಗಿನ ಕೆಲವು ಮರಗಳಿಂದ ಉದುರಿದ ಹಳದಿ ಹೂಗಳು ಚೆಲ್ಲಿದವು.ನಿಜಕ್ಕೂ ಮರವೊಂದು ತನ್ನ ಸುತ್ತ ಹಳದಿ ಹೂಗಳ ಚಿತ್ತಾರ ಬಿಡಿಸಿದಂತ ಸಂಭ್ರಮ.

ಇಡಿ ಮೈದಾನ ಸಮಯ 7.00 ಗಂಟೆಗೆಲ್ಲ ಕ್ರಿಕೆಟ್ ಪ್ರೇಮಿಗಳ ತುಂಬ ತುಂಬಿ.ಹತ್ತಾರು ತಂಡಗಳು ಅಲ್ಲಲ್ಲಿ ವಿಕೆಟ್ಗಳನ್ನು ಉಗಿದು ಸಣ್ಣ ಬೌಂಡರಿಗಳನ್ನು ಇಟ್ಟುಕೊಂಡು ಆಟ ಆಡಲು



ಶುರು ಮಾಡುತ್ತಿದ್ದರು. ಎಲ್ಲೆ ಬಾಲ್ ಹೋದರು ಕ್ರಿಕೆಟ್ ಆಡುವ ಹುಡುಗರು ಬಾಲ್ ಬಾಲ್ ಎಂದು ಕೂಗು ಹಾಕಿದರೆ ಸಾಕು ವಾಕಿಂಗ್ ಮಾಡುವ ಅಂಕಲ್ ಗಳು ಕೊಡುವಷ್ಟು ಮೈದಾನದಲ್ಲಿ ವಾಕಿಂಗ್ ಪ್ರಿಯರು ತುಂಬಿರುತ್ತಿದ್ದರು.


ನಾವು ಸ್ಕೂಟಿ ಬಿಡುವ ಮೈದಾನದ ದ್ವಾರ ಪಶ್ಚಿಮದ್ವಾರ ಅಂದರೆ ಮುನ್ಸಿಪಲ್ ಕಾಲೇಜ್ ಎದುರುಗಡೆ ಒಂದು ಕಟ್ಟೆ ಇತ್ತು. ಆ ಕಟ್ಟೆಯನ್ನು ನಾನು ವಿಜಯನಗರ ಕಾಲೇಜ್ ನಲ್ಲಿ.ಪಿ.ಯು.ಸಿ ಓದುವಾಗಿನಿಂದ ನೋಡುತ್ತ ಬಂದಿರುವೆ. ಮೈದಾನದಲ್ಲಿ ಕಾರ್ಯಕ್ರಮ ನಡೆದಾಗ ಅಥಾವ ಕ್ರೀಡಾಕೂಟಗಳು ನಡೆದಾಗ ಆ ಕಟ್ಟೆಯ ಮುಂದಗಡೆ ವೇದಿಕೆ ಹಾಕಲಾಗುತ್ತಿತ್ತು ಆದರೆ ಆ ಕಟ್ಟೆಯನ್ನು ಕಾರ್ಯಕ್ರಮಕ್ಕೆ ಬಳಸಿದ್ದು ಕಡಿಮೆ .ಹಾಗಾಗಿ ಆ ಕಟ್ಟೆಯನ್ನು ಯಾಕೆ ಕಟ್ಟಿರಬಹುದು ಎಂದು ಕೆಲವು ಬಾರಿ ಮನಸ್ಸಲ್ಲಿ ಕೇಳಿಕೊಂಡರು ಅದಕ್ಕೆ ಸರಿಯಾದ ಉತ್ತರ ಮೊನ್ನೆಯವರೆಗೂ ದಕ್ಕಿರಲಿಲ್ಲ.ನಾವು ವಾಕಿಂಗ್ ಮಾಡುವಾಗ ನನ್ನ ಪರಿಚಯಸ್ಥರಾದ ಅಮರಾವತಿ ಸಹಕಾರ ಸಂಘದ ಅಧ್ಯಕ್ಷರಾದ ಮೇಘನಾಥ ಅವರು ಆ ಕಟ್ಟೆಯ ಮೇಲೆ ಏರಿ ಯೋಗಸಾನದ ಮಾಡುತ್ತಿದ್ದರು.ನಮ್ಮೆಲ್ಲ ವಾಕಿಂಗ್ ಮುಗಿದರು ಕೂಡ ಮೇಘನಾಥಣ್ಣನ ಯೋಗಸಾನ ನಡೆಯು ತ್ತಲೆ ಇತ್ತು. ಆ ಕಟ್ಟೆಯ ಮೇಲೆ ಕುಳಿತು ಮೈದಾನ ನೋಡಿದರೆ ಮೈದಾನದ ನೋಟವೆಲ್ಲ ಒಂದು ಕಣ್ಣ ಸೆರೆಯಲ್ಲಿ ಇಡಿಯಬಹುದಿತ್ತು. ಹಳೆಯ ಕಾಲದ ವಿನ್ಯಾಸದಲ್ಲಿ ಇದ್ದ ಕಟ್ಟೆ ಚೌಕಕಾರದಲ್ಲಿ ಇದ್ದು ಪುರಾತನ ಕಾಲದವ ನಾನು ಎನ್ನುವ ಮನೆಯ ಅಜ್ಜಂದಿರಂತೆ ಮೈದಾನದಲ್ಲಿ ಇತ್ತು.

ಈಗ ಕರ್ನಾಟಕದ ಸರಕಾರವು ಎರಡು ವರ್ಷಗಳನ್ನು ಪೂರೈಸಿದ ಸಂಭ್ರಮಕ್ಕೆ ಇದೇ ಮೈದಾನದಲ್ಲಿ ಸಮರ್ಪಣೆ ಸಂಕಲ್ಪ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ ಆ ಕಟ್ಟೆ ಈಗ ಕಾರ್ಯಕ್ರಮದಲ್ಲಿ ಕೇಂದ್ರ ಬಿಂದುವಾಗಿದೆ ,ಕಟ್ಟೆಯ ಕುರಿತು ನನ್ನೊಳಗಿದ್ದ ಹಲವು ಪ್ರಶ್ನೆಗಳಿಗೆ ಉತ್ತರ ಸಿಕ್ಕಿದೆ. ಅದು ಬರಿ ಕಟ್ಟೆಯಲ್ಲಿ ಇತಿಹಾಸವಿರುವ ಕಟ್ಟೆ.ಬರಿ ಊರು –ಕೇರಿ ಪೇಟೆಯ ಇತಿಹಾಸವಲ್ಲ ,ಭಾರತದ ಉಕ್ಕಿನ ಮಹಿಳೆ ಇಂದಿರಾ ಗಾಂದಿ ಅವರು ಈ ಹಿಂದೆ ಹೊಸಪೇಟೆ ನಗರಕ್ಕೆ ಬೇಟಿ ಕೊಟ್ಟಾಗ ಅಂದು ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ಸಭಿಕರನ್ನು ಉದ್ದೇಶಿಸಿ ಮಾತನಾಡಲು ಇಂದಿರಾಗಾಂಧಿ ಅವರಿಗಾಗಿ ಕಟ್ಟಿದ ಕಟ್ಟೆಯಂತೆ. ಮಾಧ್ಯಮದಲ್ಲಿ ಅಂದಿನ ಇಂದಿರಾ ಕಟ್ಟೆಯನ್ನು ಮತ್ತೆ ನವೀಕರಣ ಮಾಡಿ ಅಲ್ಲಿ ಇಂದಿರಾ ಗಾಂಧಿ ಅವರ ಮೂರ್ತಿಯನ್ನು ಸ್ಥಾಪಿಸಲಾಗುತ್ತದೆ, ಸಮರ್ಪಣೆಯ ಸಂಕಲ್ಪ ಕಾರ್ಯಕ್ರಮದಲ್ಲಿ ಅದನ್ನು ಉದ್ಘಾಟನೆ ಮಾಡಲಾಗುವುದು ಎಂದು ವರದಿಗಳನ್ನು ಓದಿದೆ.ಕುತೂಹಲ ತಡೆಯದೆ ಬೆಳ್ಳಿಗೆ ಮೇಘನಾಥಣ್ಣನಿಗೆ ಕರೆ ಮಾಡಿ ನೀವು ಯೋಗ ಮಾಡುತ್ತಿದ್ದ ಕಟ್ಟೆಯ ಕುರಿತು ಕೇಳಿದರ ಎಂದೆ ? ಅಮರಾವತಿಯವರಾದ ಮೇಘನಾಥಣ್ಣನಿಗೆ ಅದರು ಕುರಿತು ಮಾಹಿತು ಇತ್ತು.ಹೌದ ಸರ್ ಅದು ಇಂದಿರಮ್ಮ ಕಟ್ಟೆ .ನಾವು ಕೂಡ ಅದರ ಕುರಿತು ಕಾಯಕಲ್ಪ ಮಾಡಲು ಹಲವು ಬಾರಿ ತಿಳಿಸಿದ್ದೆವು.ಈಗ ಕಾಲ ಕೂಡಿ ಬಂದಿದೆ ಎಂದರು. ಜಿಲ್ಲಾ ಕ್ರೀಡಾಂಗಣ ರೂಪುಗೊಂಡಾಗ ಕೂಡ ಕಟ್ಟೆಯನ್ನು ಹಾಗೆ ಉಳಿಸಿಕೊಳ್ಳಲಾಗಿತ್ತು ಎಂಬ ಮಾಹಿತಿ ಹಂಚಿಕೊಂಡರು. ದಿನಾಲು ಅದರ ಹತ್ತಿರ ಹೋಗುತ್ತಿದ್ದ ನಾನು ,ಈ ಕಟ್ಟೆಗೆ ಇಷ್ಟೊಂದು ಇತಿಹಾಸವಿದೆ ಎನ್ನುವ ಪರಿ ಇರಲಿಲ್ಲ. ಈಗ ಕಟ್ಟೆಗೆ ಜೀವ ಬಂದು ಹೊಸ ರೂಪು ಪಡೆದುಕೊಂಡಿದೆ. ಕಟ್ಟೆಯು ಈಗಿನ ಕಾರ್ಯಕ್ರಮಕ್ಕೆ ಸಾಕ್ಷಿಯಾಗಿ ತನ್ನ ಇತಿಹಾಸವನ್ನು ಇನ್ನಷ್ಟು ಗಟ್ಟಿಮಾಡಿಕೊಂಡಿದೆ. ಒಂದು ಕಟ್ಟೆಗೂ ಎಷ್ಟು ಚೆಂದದ ಇತಿಹಾಸವಿದೆ ಅಲ್ವ.

# ಬಾಲಕಿ ಅಪಹರಣ: ಪ್ರಕರಣ ದಾಖಲು

**ಹಂಪಿ ಟೈಮ್ಸ್ ಕೊಪ್ಪಳ**

ಕೊಪ್ಪಳ ತಾಲೂಕಿನ ಬಿ.ಹೊಸಳ್ಳಿ ಗ್ರಾಮದ ನಾಗರತ್ನ ತಂದೆ ಹನುಮಂತಪ್ಪ




ಕ್ಯಾಶಪ್ಪನವರ್ ಎಂಬ 11 ವರ್ಷ ಬಾಲಕಿ ಮೇ 5 ರಂದು ಸಂಜೆ 7 ಗಂಟೆಗೆ ಸುಮಾರಿಗೆ ಅಪಹರಣಕ್ಕೊಳಗಾಗಿದ್ದು, ಕೊಪ್ಪಳ ಮಹಿಳಾ ಪೊಲಿಸ್ ಠಾಣೆಯ ಗುನ್ನೆ ನಂ: 24/2025 ಕಲಂ:137(2) ಬಿ.ಎನ್.ಎಸ್ ಕಾಯ್ದೆ ಅಡಿಯಲ್ಲಿ ಪ್ರಕರಣ ದಾಖಲಿಸಲಾಗಿದೆ.

ಬಾಲಕಿಯು ಬುದ್ಧಿಮಾಂದ್ಯವಿದ್ದು, ತನ್ನ ಅಜ್ಜಿಯಾದ ಶಿವಮ್ಮ ಕುಕ್ಕೆಪ್ಪನವರ್ ಅವರು ಸಂತೆ ಮಾಡುವ ಸಲುವಾಗಿ ಮೇ. 5 ರಂದು ಮದ್ಯಾಹ್ನ 3 ಗಂಟೆಗೆ ಬಾಲಕಿಯನ್ನು ತನ್ನ ಜೊತೆ ಕರೆದುಕೊಂಡು ಕೊಪ್ಪಳಕ್ಕೆ ಬಂದಿದ್ದು, ನಂತರ ಊರಿಗೆ ಹಿಂದಿರುಗಲು ಬಸ್ ನಿಲ್ದಾಣದಲ್ಲಿ ಬಂದಿರುತ್ತಾರೆ. ಸಂಜೆ 7 ಗಂಟೆಗೆ ಅಜ್ಜಿಗೆ ಸ್ವಲ್ಪ ನಿದ್ದೆ ಬಂದಿದ್ದು, ನಂತರ ಎಚ್ಚರವಾದಾಗ ಬಾಲಕಿಯು ಕಾಣಲಿಲ್ಲ ಹಾಗೂ ಎಲ್ಲಾ ಕಡೆ ಹುಡುಕಿದರು ಸಿಕ್ಕಿರುವುದಿಲ್ಲ. ಅಪಹರಣ ಶಂಕೆ ಹಿನ್ನೆಲೆಯಲ್ಲಿ ಬಾಲಕಿಯ ತಂದೆ ಹನುಮಂತಪ್ಪ ಕುಕ್ಕೆಪ್ಪನವರ್ ಕೊಪ್ಪಳ ಮಹಿಳಾ ಪೊಲಿಸ್ ಠಾಣೆಯಲ್ಲಿ ದೂರು ನೀಡಿದ್ದಾರೆ.

ಈ ಬಾಲಕಿಯು ಕಂಡುಬಂದಲ್ಲಿ ಕೊಪ್ಪಳ ಮಹಿಳಾ ಠಾಣೆ ದೂ.ಸಂ: 08539–221233, ಮಹಿಳಾ ಠಾಣೆ ಪಿ.ಐ ಮೊ.ಸಂ 8861116999, ತನಿಖಾಧಿಕಾರಿ ಶಶಿಕಲಾ ಮೊ.ಸಂ: 8217391502 ಹಾಗೂ ಕೊಪ್ಪಳ ಪೊಲೀಸ್ ಕಂಟ್ರೋಲ್ ರೂಂ ದೂ.ಸಂ: 9480803700 ಗೆ ಮಾಹಿತಿ ನೀಡುವಂತೆ ಮಹಿಳಾ ಪೊಲೀಸ್ ಠಾಣೆಯ ಅಧಿಕಾರಿಗಳು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.



Grow Your Business With Us
S.M.Traders & Services
Authorised Distributor for ATLAS COPCO Portable Screw Air Compressors
for North Karnataka
Water Well and Non Water Well Applications
web: www.smtradersandservices.com
M: 9686663125 - 9686663132
Atlas Copco
Head Office- Hospet, Vijayanagara district, Karnataka | Branch office 1- Ilkal, Bagalkot district, Karnataka | Branch office 2- Vijayapura, Karnataka

## ತುಂಗಭದ್ರಾ ನೀರಿನ ಮಟ್ಟ

ಸೋಮವಾರ : 19–05–2025

| | |
|---|---|
| ಗರಿಷ್ಠ ಮಟ್ಟ | 1633 ಅಡಿ |
| ಇಂದಿನ ಮಟ್ಟ | 1586.58 ಅಡಿ |
| ಒಳ ಹರಿವು | 5806 ಕ್ಯುಸೆಕ್ |
| ಹೊರ ಹರಿವು | 2223 ಕ್ಯುಸೆಕ್ |
| ಇಂದಿನ ಸಾಮರ್ಥ್ಯ | 8.405 ಟಿಎಂಸಿ |
| ಗರಿಷ್ಠ ಸಾಮರ್ಥ್ಯ | 105.788 ಟಿಎಂಸಿ |
| ಕಳೆದ ವರ್ಷ ಇದೇ ದಿನ | |
| ಇಂದಿನ ಮಟ್ಟ | 1577.54 ಅಡಿ |
| ಒಳ ಹರಿವು | 0 ಕ್ಯುಸೆಕ್ |
| ಹೊರ ಹರಿವು | 0 ಕ್ಯುಸೆಕ್ |
| ಸಾಮರ್ಥ್ಯ | 3.392 ಟಿಎಂಸಿ |

## ನಿತ್ಯ ಪಂಚಾಂಗ

ಮಾಸ: ವೈಶಾಖ । ಸಂವತ್ಸರ: ವಿಶ್ವಾವಸು

20–05–2025 – ಮಂಗಳವಾರ

| | |
|---|---|
| ತಿಥಿ | : ಸಪ್ತಮಿ/ಅಷ್ಟಮಿ |
| ಪಕ್ಷ | : ಕೃಷ್ಣ |
| ನಕ್ಷತ್ರ | : ಧನಿಷ್ಠ |
| ಯೋಗ | : ಇಂದ್ರ |
| ಕರಣ | : ಭವ |
| ಸೂರ್ಯೋದಯ | : 05:45:02 |
| ಸೂರ್ಯಾಸ್ತ | : 19:02:11 |
| ರಾಹು ಕಾಲ | : 14:43–17:23 |
| ಯಮಘಂಡ ಕಾಲ | : 09:04–10:44 |
| ಗುಳಿಕ ಕಾಲ | : 12:24–14:03 |

# ಸೈನಿಕನಾಗಲು ಪ್ರಭಾವ ಬೀರಿದ ವಂದೇ ಮಾತರಂ
# ವೀರಯೋಧ ಜಿ.ಶರಣೇಶ ಅವರ ಸಂದರ್ಶನ

ಗಡಿ ಭದ್ರತಾ ಪಡೆಯ ಯೋಧನಾಗಿ ಭಾರತಮಾತೆಯ ಸೇವೆಗೈಯ್ಯುವ ಅವಕಾಶ ದೊರೆತದ್ದು ತನ್ನ ಪುಣ್ಯ"ವೆಂದೆ ಹೆಮ್ಮೆಯಿಂದ ಹೇಳುವ ವೀರಯೋಧ ಜಿ ಶರಣೇಶ್. ಇವರು ಸತತ ಇಪ್ಪತ್ತು ವರ್ಷ, ಏಳು ತಿಂಗಳು, ಐದು ದಿವಸಗಳ ಕಾಲ ಗಡಿ ಭದ್ರತಾ ಪಡೆಯಲ್ಲಿ ಸೈನಿಕನಾಗಿ, ಆಂಟಿ ನಕ್ಸಲ್ ಆಪರೇಷನ್ ಗಳಲ್ಲಿ ಕರ್ತವ್ಯ ನಿರ್ವಹಿಸಿ, ಇದೀಗ ಸ್ವಯಂ ನಿವೃತ್ತಿ ಹೊಂದಿ ತಾಯ್ನಾಡಿಗೆ ಮರಳಿ ಬಂದಿದ್ದಾರೆ. ದೇಶ ಸೇವೆಗೆ ತನ್ನ ಅಗತ್ಯ ಬೇಕೆನಿಸಿದರೆ ತಾನು ಈಗಲೂ ತೆರಳಲು ಸಿದ್ಧವೆಂದು ಹೆಮ್ಮೆಯಿಂದ ಹೇಳುವ ವೀರಯೋಧನ ಮನದಾಳದ ಮಾತುಗಳನ್ನು ಈ ಸಂದರ್ಶನದ ಮೂಲಕ ತಿಳಿಯೋಣ ಬನ್ನಿ.....



**1. ಸರ್ ತಮ್ಮ ಸಂಕ್ಷಿಪ್ತ ಪರಿಚಯ ತಿಳಿಸಿ...**

ಹುಟ್ಟಿದ್ದು ವಿಜಯನಗರ ಜಿಲ್ಲೆ ಕೂಡ್ಲಿಗಿ ತಾಲೂಕಿನ ಕ್ಯಾಸನಕೆರೆ ಗ್ರಾಮದಲ್ಲಿ.ತಂದೆ ಬೊಮ್ಮಪ್ಪ ಪೊಲೀಸ್ ಇಲಾಖೆಯಲ್ಲಿ ನೌಕರರಾಗಿದ್ದರು. ತಾಯಿ ಗಂಗಮ್ಮ ಗೃಹಿಣಿ. ಪ್ರಾಥಮಿಕದಿಂದ ಎಂಟನೇ ತರಗತಿಯನ್ನು ಬಳ್ಳಾರಿಯ ಡಿಎಆರ್ ಶಾಲೆಯಲ್ಲಿ, 9ನೇ ತರಗತಿಯನ್ನು ಎಂ.ಬಿ.ಐನಳ್ಳಿ ಸರ್ಕಾರಿ ಪ್ರೌಢಶಾಲೆಯಲ್ಲಿ,10ನೇ ತರಗತಿಯನ್ನು ಗುರುಮಿಟ್ಕಲ್‌ನ ಪುಟ್ಟಪಾಕದಲ್ಲಿ, ಪಿಯುಸಿಯನ್ನು ಕಾನಮಡುಗಿನ ಶ್ರೀ ಸಿದ್ದಲಿಂಗೇಶ್ವರ ಕಾಲೇಜಿನಲ್ಲಿ ಪೂರೈಸಿದ್ದೇನೆ. ಮಡದಿ ಶ್ರೀಮತಿ ಶಿಲ್ಪಾ ಜೆ ಮತ್ತು ಇಬ್ಬರು ಮುದ್ದು ಮಕ್ಕಳ ಕೂಡು ಕುಟುಂಬ ನಮ್ಮದು.

**2. ತಾವು ಸೈನ್ಯಕ್ಕೆ ಸೇರಲು ಕಾರಣ ಮತ್ತು ಸ್ಪೂರ್ತಿ ಏನು....?**

ನನಗೆ ಬಾಲ್ಯದಲ್ಲಿಯೇ ದೇಶ ಸೇವೆ ಮಾಡಬೇಕೆಂಬ ಭಾವನೆ ಇತ್ತು.ನಮ್ಮ ತಂದೆ ಮತ್ತು ನಮ್ಮ ಸಂಬಂಧಿಗಳಲ್ಲಿ ಸಾಕಷ್ಟು ಜನ ಆರಕ್ಷಕರಾಗಿ ಕೆಲಸ ನಿರ್ವಹಿಸುತ್ತಿದ್ದುದನ್ನು ನಾನು ಬಾಲ್ಯದಿಂದಲೂ ನೋಡಿ ಬೆಳೆದವನು . ತಾನೂ ಸಹ ಅವರ ಹಾಗೆ ದೇಶ ರಕ್ಷಣೆಯಲ್ಲಿ ತೊಡಗಬೇಕೆಂಬ ಇಚ್ಛೆ ಬೆಳೆಸಿಕೊಂಡಿದ್ದೆ.ಪಿಯುಸಿ ಪರೀಕ್ಷೆಯ ಸಮಯದಲ್ಲಿ ಜಗಳೂರಿನ ಚಿತ್ರಮಂದಿರವೊಂದರಲ್ಲಿ ನೋಡಿದ "ವಂದೇ ಮಾತರಂ" ಚಲನಚಿತ್ರ ನನ್ನ ಮೇಲೆ ಗಾಢ ಪ್ರಭಾವ ಬೀರಿತು. ನಾನು ಸೈನಿಕನಾಗಬೇಕೆಂಬ ಹಠ ಮೂಡಿಸಿತು.

**3. ತಾವು ಸೈನ್ಯಕ್ಕೆ ಸೇರುತ್ತೇನೆ ಎಂದಾಗ ಕುಟುಂಬದವರ ಪ್ರತಿಕ್ರಿಯೆ ಹೇಗಿತ್ತು...?**


ನಾನು ಸೈನ್ಯದ ಕೆಲಸಕ್ಕೆ ಅರ್ಜಿ ಹಾಕಿದ್ದೇನೆ ಅದರ ಆಯ್ಕೆಗೆ ಹಾವೇರಿಗೆ ತೆರಳಬೇಕೆಂದಾಗ ನನ್ನ ತಾಯಿ ಪ್ರೀತಿಯಿಂದ 400 ರೂಪಾಯಿಗಳನ್ನು ಖರ್ಚಿಗೆ ಕೊಟ್ಟು, "ದೇಶ ರಕ್ಷಣೆಯ ಕೆಲಸಕ್ಕೆ ಹೋಗುತ್ತಿರುವ ನಿನಗೆ ಶುಭವಾಗಲಿ" ಎಂದು ಆಶೀರ್ವಾದ ಮಾಡಿದ್ದರು. ಸೈನ್ಯಕ್ಕೆ ಆಯ್ಕೆಯಾದಾಗ ಹೆಮ್ಮೆಯಿಂದ ಕುಟುಂಬದವರು ಕಳಿಸಿಕೊಟ್ಟಿದ್ದರು.

**4. ಸೈನ್ಯದ ಆರಂಭದ ತರಬೇತಿ ಹೇಗಿತ್ತು...?**

ನಾನು ಬಿಎಸ್ಎಫ್ ನ ಕಾನ್ಸ್ಟೇಬಲ್ (ಜಿ. ಡಿ.) ಹುದ್ದೆಗೆ ಆಯ್ಕೆಯಾದೆ. ದಿನಾಂಕ 25– 9– 2004 ರಂದು ಬೆಂಗಳೂರಿನ ಬಿಎಸ್ಎಫ್ ಕ್ಯಾಂಪ್ನಲ್ಲಿ ಕರ್ತವ್ಯಕ್ಕೆ ವರದಿ ಮಾಡಿಕೊಂಡೆ.ತರುವಾಯ ಜಾರ್ಖಂಡ್ ರಾಜ್ಯದ ಹಜಾರಿಬಾಗ್ ಜಿಲ್ಲೆಯ ಮೇರು ಕ್ಯಾಂಪ್ನಲ್ಲಿ ಒಂಬತ್ತು ತಿಂಗಳ ಕಠಿಣ ತರಬೇತಿ ನೀಡಿದರು. ಬೆಳಿಗ್ಗೆ ಐದು ಮೂವತ್ತರ ಸುಮಾರಿಗೆ ವ್ಯಾಯಾಮದೊಂದಿಗೆ ನಮ್ಮ ತರಬೇತಿ ಆರಂಭವಾಗುತ್ತಿತ್ತು. ಸದರಿ ತರಬೇತಿಯ ಸಮಯದಲ್ಲಿ ಡ್ರಿಲ್ ಪಿರಿಯಡ್,ವೆಪನ್ ಮತ್ತು ಫೀಲ್ಡ್ ಇಂಜಿನಿಯರಿಂಗ್, ಭಾಷಾ ತರಬೇತಿ,ಮಂಕಿ ರೋಪ್,ಆರರಿಂದ ಹತ್ತು ಅಡಿ ವಾಲ್ ಜಂಪ್, 9 ಅಡಿ ಲಾಂಗ್ ಜಂಪ್..... ಮೊದಲಾದ ಅಭ್ಯಾಸಗಳನ್ನು ಮಾಡಿಸಿ ದೈಹಿಕವಾಗಿ ಗಟ್ಟಿಗೊಳಿಸುತ್ತಿದ್ದರು. ಮಾನಸಿಕ ಸದೃಢತೆಗೆ ದೇಶಾಭಿಮಾನದ ಚಲನಚಿತ್ರಗಳನ್ನು ತೋರಿಸುತ್ತಿದ್ದರು. ಹಲವು ಉಪನ್ಯಾಸಗಳ ಮೂಲಕ ಮಾನಸಿಕ ಸದೃಢತೆಯ ತಂತ್ರಗಾರಿಕೆಗಳನ್ನು ತಿಳಿಸಿಕೊಡುತ್ತಿದ್ದರು.

ಹಾಗೆಯೇ ಪ್ರತಿ ಶನಿವಾರದಂದು ಫೀಲ್ಡ್ ಫಿಸಿಕಲ್ ಎಫಿಶಿಯನ್ಸಿ ಟೆಸ್ಟ್ ನಡೆಯುತ್ತಿತ್ತು.ಭುಜದ ಮೇಲೆ 10 ಕೆಜಿ ತೂಕದ ವಸ್ತುಗಳನ್ನು ಅನಾಯಾಸವಾಗಿ ತೆಗೆದುಕೊಂಡು ಹೋಗುವ ಅಭ್ಯಾಸ ಮಾಡಿಸುತ್ತಿದ್ದರು. ಸದರಿ ಬ್ಯಾಗ್ ನಲ್ಲಿ ಪಿಟಿ ಶೂ, ಸಾಕ್ಸ್, ಟವೆಲ್, ಬನಿಯನ್, ಅಂಡರ್ವೇರ್, ಶೇವಿಂಗ್ ಐಟಮ್ಸ್,ಊಟದ ಡಬ್ಬಿ,ಎರಡು ಲೀಟರ್ ನೀರು,ಸೂಜಿ ದಾರ,ಬಟನ್ಸ್.... ಮೊದಲಾದ ಅಗತ್ಯ ಪರಿಕರಗಳು ಇರುತ್ತಿದ್ದವು.

ತರಬೇತಿಯ ಕಠಿಣತೆಗೆ ಹೆದರಿ ಕೆಲವರು ಬಿಟ್ಟು ಹೋಗುತ್ತಿದ್ದರು. ನಾನು ಮಾತ್ರ ಅತ್ಯುತ್ಸಾಹದಿಂದ ಛಲ ಬಿಡದೆ ತರಬೇತಿ ಪಡೆದುಕೊಂಡೆ.ತರಬೇತಿಯ ನಂತರ ಅದೇ ತರಬೇತಿ ಕೇಂದ್ರದಲ್ಲಿಯೇ ಒಂದು ವರ್ಷ ಡೆಮೋ ಪ್ಲಾಟೂನ್ ಆಗಿ ಸೇವೆ ಸಲ್ಲಿಸಿದೆ.



ಶೇಖರಯ್ಯ ಟಿ.ಎಚ್.ಎಂ, ಶಿಕ್ಷಕರು, ಕೂಡ್ಲಿಗಿ

**5. ತಾವು ಯಾವ ಯಾವ ಸ್ಥಳಗಳಲ್ಲಿ ಕರ್ತವ್ಯ ನಿರ್ವಹಿಸಿದ್ದೀರಿ....**

2006–2008 ರವರೆಗೆ ರಾಜಸ್ಥಾನ್ ರಾಜ್ಯದ ಬಿಕಾನೆರ್ ಜಿಲ್ಲೆಯ ಖಾಜುವಾಲಾ ಭಾರತ ಪಾಕಿಸ್ತಾನ ಗಡಿಯಲ್ಲಿ....
2008–2011 ರವರೆಗೆ ತ್ರಿಪುರ ರಾಜ್ಯದ ಪಾಣಿಸಾಗರ್ ಭಾರತ ಬಾಂಗ್ಲಾ ಗಡಿಯಲ್ಲಿ...
2011–2012 ರ ವರೆಗೆ ನಾಗಾಲ್ಯಾಂಡ್ ರಿಸರ್ವ್ ಬೆಟಾಲಿಯನ್ ನಲ್ಲಿ...
2012–2015 ರವರೆಗೆ ಛತ್ತಿಸ್ ಗಢದಲ್ಲಿ ಆಂಟಿ ನಕ್ಸಲ್ ಆಪರೇಷನ್ ನಲ್ಲಿ....



2015–2019 ರವರೆಗೆ ಪಶ್ಚಿಮ ಬಂಗಾಳದ ನ್ಯೂ ಫರಕ್ಕ (ಮಾಲ್ಡಾ) ಭಾರತ ಬಾಂಗ್ಲಾ ಗಡಿಯಲ್ಲಿ....
2019–2021 ರವರೆಗೆ ಒಡಿಸ್ಸಾ ರಾಜ್ಯದ ಮಲ್ಕನ್ ಗಿರಿ ಜಿಲ್ಲೆ ಚಿತ್ರಕೊಂಡ ತಾಲ್ಲೂಕು ಆಂಟಿ ನಕ್ಸಲ್ ಆಪರೇಷನ್ ನಲ್ಲಿ ಕರ್ತವ್ಯ....
2021–2025 ರ ಏಪ್ರಿಲ್ 30ರವರೆಗೂ ಹರಿಯಾಣ ರಾಜ್ಯದ ಹಿಸ್ಸಾರ್ ಜಿಲ್ಲೆಯ ರಿಸರ್ವ್ ಬೆಟಾಲಿಯನ್‌ನಲ್ಲಿ....
ಹೀಗೆ ಒಟ್ಟು ಇಪ್ಪತ್ತು ವರ್ಷ, ಏಳು ತಿಂಗಳು,ಐದು ದಿವಸಗಳ ಕಾಲ ಕರ್ತವ್ಯ ನಿರ್ವಹಿಸಿ ಇದೀಗ ಸ್ವಯಂ ನಿವೃತ್ತಿ ಹೊಂದಿ ತಾಯ್ನಾಡಿಗೆ ಮರಳಿದ್ದೇನೆ.

**6. ಸಹೋದ್ಯೋಗಿಗಳ ಜೊತೆ ಸಂಬಂಧ ಹೇಗಿರುತ್ತಿತ್ತು....**

ಸಹೋದ್ಯೋಗಿಗಳೆಲ್ಲ ಅತ್ಯಂತ ಆತ್ಮೀಯತೆಯಿಂದ ಇರುತ್ತಿದ್ದೆವು. ಹಬ್ಬ ಹರಿದಿನಗಳನ್ನು ಕ್ಯಾಂಪ್ನಲ್ಲಿ ಆಚರಿಸುತ್ತಿದ್ದೆವು. ಕನ್ನಡ ಮಾತಾಡುವವರು ಸಿಕ್ಕರೆ ಖುಷಿಯಾಗುತಿತ್ತು.

**7. ತಾವು ಎದುರಿಸಿದ ಅತ್ಯಂತ ಕಠಿಣ ಸನ್ನಿವೇಶ....**

ಛತ್ತೀಸ್ಗಡದಲ್ಲಿ ನಕ್ಸಲೆಟ್ ಗಳು ತಮ್ಮ ಮೇಲೆ ದಾಳಿ ಮಾಡಲು ಯತ್ನಿಸಿದ್ದರು.ಅದು ಮಿಸ್ ಫೈರ್ ಆಗಿದ್ದರಿಂದ ಜೀವ ಉಳಿಯಿತು. ಒಡಿಸ್ಸಾ ರಾಜ್ಯದಲ್ಲಿ ಇಂಪ್ರೂವ್ಡ್ ಎಕ್ಸ್ ಪ್ಲೋಸಿವ್ ಡಿವೈಸನ್ನು ನೆಲದಲ್ಲಿ ಇಟ್ಟಿದ್ದರು. ಮೆಟಲ್ ಡಿಟೆಕ್ಟರ್ ಮೂಲಕ ಕಂಡು ಹಿಡಿದು ಅದನ್ನು ನಿಷ್ಕ್ರಿಯಗೊಳಿಸಿದ್ದೆವು ಮತ್ತು ಪ್ರಾಣಾಪಾಯದಿಂದ ಪಾರಾಗಿದ್ದೆವು.

**8. ತಮಗೆ ಎಂದಾದರೂ ಸೈನ್ಯದ ಕೆಲಸ ಸಾಕು ಬಿಟ್ಟು ಹೋಗೋಣ ಅಂತ ಅನ್ನಿಸಿತ್ತೆ....**

ನನಗೆ ಎಂದೂ ಆ ಆಲೋಚನೆ ಬರಲಿಲ್ಲ.

**9. ಸೈನಿಕರಾಗಬಯಸುವವರಿಗೆ ತಮ್ಮ ಸಲಹೆಗಳು....**

ಸೈನಿಕರಾಗಲು ದೈಹಿಕ ಸದೃಢತೆ ತುಂಬಾ ಮುಖ್ಯ. ಇದಕ್ಕಾಗಿ ಪ್ರತಿದಿನ ರನ್ನಿಂಗ್, ಪುಶ್ ಅಪ್, ಉದ್ದ ಜಿಗಿತ, ಎತ್ತರ ಜಿಗಿತವನ್ನು ಅಭ್ಯಾಸ ಮಾಡಿ. ದೈಹಿಕವಾಗಿ,ಮಾನಸಿಕವಾಗಿ ಗಟ್ಟಿಗೊಳ್ಳಿ.ದೇಶ ಸೇವೆ ಮಾಡುವ ಅವಕಾಶ ಸಿಕ್ಕರೆ ಯಾವುದೇ ಕಾರಣಕ್ಕೂ ಬಿಡಬೇಡಿ. ದೇಶಸೇವೆ ಮಾಡುವ ಭಾಗ್ಯ ಎಲ್ಲರಿಗೂ ದೊರೆಯದು.

**10. ಸೈನ್ಯವನ್ನು ಬಿಟ್ಟು ಬರುವಾಗ ಏನನ್ನಿಸಿತು....**

ಕ್ಯಾಂಪ್ನಲ್ಲಿ ಸ್ನೇಹಿತರಾಗಿ, ಒಂದೇ ಕುಟುಂಬದ ಸದಸ್ಯರಂತೆ ಇದ್ದ ಸ್ನೇಹಿತರನ್ನು ಬಿಟ್ಟು ಬರುವಾಗ ತುಂಬಾ ಬೇಸರವಾಯಿತು.ದೇಶ ಸೇವೆಗೆ ನನ್ನ ಸೇವೆ ಬೇಕೆಂದರೆ ತಾನು ಯಾವಾಗಲೂ ತೆರಳಲು ಸಿದ್ದ.

**11. ತಾಯ್ನಾಡಿಗೆ ಮರಳಿ ಬಂದಾಗ ತಮಗೆ ಅದ್ಭುತ ಸ್ವಾಗತ ದೊರಕಿತು ಈ ಬಗ್ಗೆ ತಮ್ಮ ಅನಿಸಿಕೆ....**

ಕೂಡ್ಲಿಗಿ ತಾಲೂಕು ಆಡಳಿತದ ವತಿಯಿಂದ ಆತ್ಮೀಯ ಸ್ವಾಗತ ಮತ್ತು ಸನ್ಮಾನ ನೆರವೇರಿಸಿದ್ದು ಖುಷಿ ನೀಡಿತು. ನಮ್ಮ ಹುಟ್ಟೂರಿನಲ್ಲಿ ಊರನ್ನೆಲ್ಲ ಸಿಂಗರಿಸಿ ಅತ್ಯಂತ ಪ್ರೀತಿ ಅಭಿಮಾನದಿಂದ ನನ್ನನ್ನು ಸ್ವಾಗತಿಸಿ, ಸನ್ಮಾನಿಸಿದ ಊರವರ, ಸ್ನೇಹಿತರ, ಶಾಸಕರ, ಅಧಿಕಾರಿಗಳ, ಮಾಜಿ ಸೈನಿಕರ ಅಭಿಮಾನಕ್ಕೆ ನಾನು ಋಣಿ.

**12. ತಮ್ಮ ಮುಂದಿನ ಗುರಿ.....**

ಕೃಷಿ ಚಟುವಟಿಕೆಗಳಲ್ಲಿ ತೊಡಗಬೇಕೆಂದುಕೊಂಡಿದ್ದೇನೆ. ಹೋಟೆಲ್ ಉದ್ಯಮ ಆರಂಭ ಮಾಡಬೇಕೆಂದು ಕೊಂಡಿರುವೆ. ಮಕ್ಕಳಿಗೆ ಉತ್ತಮ ವಿದ್ಯಾಭ್ಯಾಸ ಕೊಡಿಸಿ ಉತ್ತಮ ಪ್ರಜೆಗಳನ್ನಾಗಿ ರೂಪಿಸಬೇಕೆಂಬ ಗುರಿಯಿದೆ. ಮಕ್ಕಳು ಬಯಸಿದರೆ ಅವರನ್ನು ಸೈನ್ಯಕ್ಕೆ ಕಳಿಸಲು ಸಿದ್ಧ. ಸೈನಿಕರಾಗಬಯಸುವರು ಸಲಹೆ ಸೂಚನೆ ಕೇಳಿದರೆ ನೀಡಲು ಸದಾ ಸಿದ್ಧನಿದ್ದೇನೆ. ಇಲ್ಲಿವರೆಗೂ ನನ್ನ ಸೈನ್ಯ ಜೀವನದ ಅನುಭವ ಹಂಚಿಕೊಳ್ಳಲು ಅವಕಾಶ ಮಾಡಿಕೊಟ್ಟ ತಮಗೂ ಧನ್ಯವಾದಗಳು.....



## ಮೈಕ್ರೋ ನ್ಯೂಸ್

### ಮೇ 21 ರಂದು ಅಪ್ರೆಂಟೀಸ್ ತರಬೇತಿಗೆ ಆಯ್ಕೆ ಪ್ರಕ್ರಿಯೆ

**ಹಂಪಿ ಟೈಮ್ಸ್ ಬಳ್ಳಾರಿ**

ನಗರದ ರೇಡಿಯೋ ಪಾರ್ಕ್ ಹತ್ತಿರದ ಸರ್ಕಾರಿ ಕೈಗಾರಿಕಾ ತರಬೇತಿ ಸಂಸ್ಥೆಯಲ್ಲಿ ಮೇ 21 ರಂದು ಬೆಳಿಗ್ಗೆ 09 ಗಂಟೆಗೆ ಅಪ್ರೆಂಟೀಸ್ ತರಬೇತಿಗಾಗಿ ಆಯ್ಕೆ ಪ್ರಕ್ರಿಯೆ ನಡೆಯಲಿದ್ದು, ಆಸಕ್ತ ಅಭ್ಯರ್ಥಿಗಳು ಭಾಗವಹಿಸಬಹುದು ಎಂದು ಸಂಸ್ಥೆಯ ಪ್ರಾಚಾರ್ಯರಾದ ಪಂಡಿತಾರಾಧ್ಯ ಕೆ.ಹೆಚ್.ಎಮ್ ಅವರು ತಿಳಿಸಿದ್ದಾರೆ.

ಆಯ್ಕೆ ಪ್ರಕ್ರಿಯೆಯಲ್ಲಿ ಬೆಂಗಳೂರಿನ ಟೊಯೋಟ, ಕಿರ್ಲೋಸ್ಕರ್, ಹೋಂಡ ಮೋಟಾರ್ ಸೈಕಲ್ ಕಂಪನಿಯಲ್ಲಿ ಅಪ್ರೆಂಟೀಸ್ ತರಬೇತಿ ಆಯ್ಕೆಗಾಗಿ ಲಿಖಿತ ಪರೀಕ್ಷೆ ಮತ್ತು ನೇರ ಸಂದರ್ಶನ ನಡೆಸಲಾಗುವುದು.

**ಬೇಕಾದ ದಾಖಲೆಗಳು:** 18 ವರ್ಷ ಪೂರೈಸಿರಬೇಕು. ಆಧಾರ್ ಕಾರ್ಡ್‌ನ ಪ್ರತಿ, ಎಸ್.ಎಸ್.ಎಲ್.ಸಿ ಅಂಕಪಟ್ಟಿ, ಐ.ಟಿ.ಐ ಅಂಕಪಟ್ಟಿ, ಎರಡು ಭಾವಚಿತ್ರ ಹಾಗೂ ಸ್ವ-ವಿವರದ ಪ್ರತಿ. ಫಿಟ್ಟರ್, ಟರ್ನರ್, ಎಲೆಕ್ಟ್ರಿಷಿಯನ್, ವೆಲ್ಡರ್, ಇ.ಎಂ., ಎಂ.ಎಂ.ವಿ., ಮೆಕ್ಯಾನಿಕ್ ಡೀಸೆಲ್ ವೃತ್ತಿಗಳ ಅಂತಿಮ ವರ್ಷದ ವಿದ್ಯಾರ್ಥಿಗಳು ಹಾಗೂ ಐ.ಟಿ.ಐ ಪಾಸಾದ ಆಸಕ್ತಿಯುಳ್ಳ ಅಭ್ಯರ್ಥಿಗಳು ಹಾಜರಾಗಬಹುದು ಎಂದು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.


ಹಂಪಿ ಟೈಮ್ಸ್
ವಿಜಯನಗರದ ಹೆಮ್ಮೆ
ಕನ್ನಡ ದಿನಪತ್ರಿಕೆ
SSLC ವಿದ್ಯಾರ್ಥಿಗಳಿಗಾಗಿ
ಹೈಸ್ಕೋರ್ ಮತ್ತು ಸರಳ ಅಭ್ಯಾಸಕ್ಕೆ ತಜ್ಞ ಶಿಕ್ಷಕರಿಂದ ಸುಲಭ ಅಂಶಗಳು ನಿಮ್ಮ ಹಂಪಿ ಟೈಮ್ಸ್ ದಿನಪತ್ರಿಕೆಯಲ್ಲಿ
scan to read epaper
9 ಜುಲೈ 2024 ರಿಂದ ಪ್ರತಿದಿನ
ನಿಮ್ಮ ಮೊಬೈಲ್‌ನಲ್ಲಿ ಸ್ಕ್ಯಾನ್ ಮಾಡಿ ಇನ್ಸ್ಟಾಲ್ ಮಾಡಿಕೊಳ್ಳಿ!


# ಹಂಪಿಯಲ್ಲಿ ರಾಜ್ಯದ ಎರಡನೇ ಅತಿದೊಡ್ಡ ತಾರಾಲಯ ವಿಜ್ಞಾನ ಕೇಂದ್ರ ನಿರ್ಮಾಣಕ್ಕೆ ಚಿಂತನೆ: ಭೋಸರಾಜು

**ಹಂಪಿ ಟೈಮ್ಸ್ ಹೊಸಪೇಟೆ**

ಯುನೆಸ್ಕೋ ವಿಶ್ವಪಾರಂಪರಿಕ ತಾಣಗಳಲ್ಲಿ ಒಂದಾಗಿರುವ ಹಂಪಿಯಲ್ಲಿ ರಾಜ್ಯದ ಎರಡನೇ ಅತಿದೊಡ್ಡ ಹಾಗೂ ಕಲ್ಯಾಣ ಕರ್ನಾಟಕದ ಅತಿ ದೊಡ್ಡ ತಾರಾಲಯ ಹಾಗೂ ವಿಜ್ಞಾನ ಕೇಂದ್ರವನ್ನು ನಿರ್ಮಿಸಲಾಗುವುದು ಎಂದು ಸಣ್ಣ ನೀರಾವರಿ, ವಿಜ್ಞಾನ ಮತ್ತು ತಂತ್ರಜ್ಞಾನ ಸಚಿವರಾದ ಎನ್.ಎಸ್.ಭೋಸರಾಜು ತಿಳಿಸಿದರು.

ಕಲ್ಯಾಣ ಕರ್ನಾಟಕದ ಭಾಗದ ಜನಪ್ರಿಯ ಪ್ರವಾಸಿ ತಾಣವಾವಿರುವ ವಿಜಯನಗರ ಜಿಲ್ಲೆಯ ಕಮಲಾಪುರದಲ್ಲಿ ಸ್ಥಾಪಿಸಲು ಉದ್ದೇಶಿಸಲಾಗಿರುವ ನೂತನ ವಿಜ್ಞಾನ ಕೇಂದ್ರ ಹಾಗೂ ತಾರಾಲಯ ಸ್ಥಳಕ್ಕೆ ಭೇಟಿ ನೀಡಿ ಸ್ಥಳ ಪರಿಶೀಲನೆ ನಡೆಸಿ ಸೋಮವಾರ ಅವರು ಮಾತನಾಡಿದರು. ಕಲ್ಯಾಣ ಕರ್ನಾಟಕ ಭಾಗದ ಯುವ ಜನರಲ್ಲಿ ವೈಜ್ಞಾನಿಕ ಮನೋಭಾವ ವಿಜ್ಞಾನ ಮತ್ತು ತಂತ್ರಜ್ಞಾನದ ಬಗ್ಗೆ ಆಸಕ್ತಿಯನ್ನು ಹೆಚ್ಚಿಸುವ ನಿಟ್ಟಿನಲ್ಲಿ ಹೊಸ ಯೋಜನೆಗಳನ್ನು ಹಮ್ಮಿಕೊಳ್ಳಲಾಗುತ್ತಿದೆ. ಮುಖ್ಯಮಂತ್ರಿಗಳಾದ ಸಿದ್ದರಾಮಯ್ಯನವರ ಆಶಯದಂತೆ ಪ್ರತಿ ಜಿಲ್ಲೆಗಳಲ್ಲೂ ವಿಜ್ಞಾನ ಕೇಂದ್ರ ಹಾಗೂ ತಾರಾಲಯ ನಿರ್ಮಿಸಲಾಗುತ್ತಿದೆ. ಯುನೆಸ್ಕೋ ಪಾರಂಪರಿಕ ತಾಣವಾಗಿರುವ ಹಂಪಿಯಲ್ಲಿ ಉತ್ತಮ ದರ್ಜೆಯ ಸೌಲಭ್ಯಗಳನ್ನು ಕಲ್ಪಿಸುವುದು ನಮ್ಮ ಉದ್ದೇಶವಾಗಿದೆ. ಈ ನಿಟ್ಟಿನಲ್ಲಿ ಅಗತ್ಯ ಕ್ರಮ ಕೈಗೊಳ್ಳಲು ಅಧಿಕಾರಿಗಳಿಗೆ ಸೂಚನೆ ನೀಡಲಾಗಿದೆ ಎಂದರು.



**ಉತ್ತಮ ಜಾಗ ಮಂಜೂರು:** ಕಮಲಾಪುರದ ಪ್ರಮುಖ ಜಾಗವನ್ನು ವಿಜ್ಞಾನ ಕೇಂದ್ರ ಹಾಗೂ ತಾರಾಲಯ ನಿರ್ಮಾಣಕ್ಕೆ ಉತ್ತಮ ಜಾಗವನ್ನು ಮಂಜೂರು ಮಾಡಲಾಗಿದೆ. ಪ್ರಮುಖ ರಸ್ತೆಯಲ್ಲಿ 10 ಎಕರೆ ಜಾಗ ಮಂಜೂರಾಗಿದ್ದು ಉತ್ತಮ ವಿನ್ಯಾಸದ ಮೂಲಕ ಜಾಗದ ಸದುಪಯೋಗ ಪಡಿಸಿಕೊಳ್ಳುವಂತೆ ಅಧಿಕಾರಿಗಳಿಗೆ ಸಚಿವರು ಸೂಚಿಸಿದರು.

ರಾಜ್ಯದ ಎರಡನೇ ಅತಿದೊಡ್ಡ ತಾರಾಲಯ: ಕಲ್ಯಾಣ ಕರ್ನಾಟಕದ ಅತಿದೊಡ್ಡ ಹಾಗೂ ರಾಜ್ಯದ ಎರಡನೇ ಅತಿದೊಡ್ಡ ತಾರಾಲಯವನ್ನು ಇಲ್ಲಿ ನಿರ್ಮಿಸಲು ಯೋಜಿಸಲಾಗಿದೆ. 12 ಮೀಟರ್ ನಾನೋಸೀಮ್ ಡೋಮ್ ತಾರಾಲಯ ಹಾಗೆಯೇ ಅತ್ಯಾಧುನಿಕ ಸೌಲಭ್ಯಗಳನ್ನು ಹೊಂದಿರುವವಿಜ್ಞಾನಕೇಂದ್ರನಿರ್ಮಿಸಲಾಗುವುದು. ಪ್ರವಾಸೋದ್ಯಮ ಇಲಾಖೆ ಈ ಜಾಗವನ್ನು ನೀಡಿದೆ. ಇಲ್ಲಿ ಕಾಮಗಾರಿಗಳ ಪ್ರಾರಂಭಕ್ಕೆ ಅಗತ್ಯ ತಯಾರಿ ಸಿದ್ದತೆ ಮಾಡಿಕೊಳ್ಳುವಂತೆ ಸೂಚನೆ ನೀಡಿದರು.

ಈ ಸಂಧರ್ಭದಲ್ಲಿ ಕರ್ನಾಟಕ ವಿಜ್ಞಾನ ಮತ್ತು ತಂತ್ರಜ್ಞಾನ ಪ್ರೋತ್ಸಾಹಕ ಸೊಸೈಟಿ (ಕೆಸ್ಟೆಪ್ಸ್) ವ್ಯವಸ್ಥಾಪಕ ನಿರ್ದೇಶಕರಾದ ಸದಾಶಿವ ಪ್ರಭು, ಸೇರಿದಂತೆ ಜಿಲ್ಲಾ ಮಟ್ಟದ ಅಧಿಕಾರಿಗಳು ಉಪಸ್ಥಿತರಿದ್ದರು.


ಹೊಸಪೇಟೆಯ ಜಿಲ್ಲಾ ಕ್ರೀಡಾಂಗಣದಲ್ಲಿ ಕಾಂಗ್ರೆಸ್ ಸರ್ಕಾರದ ಎರಡು ವರ್ಷದ ಸಮಾವೇಶಕ್ಕೆ ಸಿಂಗಾರಗೊಳ್ಳುತ್ತಿರುವ ವೇದಿಕೆ

# ಮೇ. 22 ರಂದು ಕೊಪ್ಪಳ ಗವಿಮಠ ಕ್ಯಾಂಪಸ್‌ನಲ್ಲಿ ಬೃಹತ್ ಉದ್ಯೋಗ ಮೇಳ

**ಹಂಪಿ ಟೈಮ್ಸ್ ಕೊಪ್ಪಳ**

ಕೊಪ್ಪಳ ಜಿಲ್ಲಾ ಉದ್ಯೋಗ ವಿನಿಮಯ ಕೇಂದ್ರ, ಬಳ್ಳಾರಿಯ ಸಮರ್ಥನಂ ಅಂಗವಿಕಲರ ಸಂಸ್ಥೆ ಹಾಗೂ ಕೊಪ್ಪಳದ ಶ್ರೀ ಗವಿಸಿದ್ದೇಶ್ವರ ಕಾಲೇಜ್ ಆಫ್ ಎಜ್ಯುಕೇಶನ್ (ಬಿ.ಇಡಿ) ಇವರ ಸಂಯುಕ್ತಾಶ್ರಯದಲ್ಲಿ ಬೃಹತ್ ಉದ್ಯೋಗ ಮೇಳವನ್ನು ಗವಿಮಠ ಕ್ಯಾಂಪಸ್ ನಲ್ಲಿ ಮೇ. 22 ರಂದು ಬೆಳಿಗ್ಗೆ 10 ರಿಂದ ಮಧ್ಯಾಹ್ನ 3 ಗಂಟೆಯವರೆಗೆ ಹಮ್ಮಿಕೊಳ್ಳಲಾಗಿದೆ. ಹೆಚ್ಚಿನ ಮಾಹಿತಿಗಾಗಿ ಮೊ. ನಂ: 9353515518ಗೆ ಸಂಪರ್ಕಿಸುವಂತೆ ತಿಳಿಸಿದ್ದಾರೆ.